

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 08 | Issue : 21 | Thursday 25-09-2025 | E-mail : maruti.b.hosamani76@gmail.com | Page: 4 | Price : Rs. 1/-


## ಪೆರ್ಡೂರು ಪಂಚಾಯತ್ ಉಪಾಧ್ಯಕ್ಷರ ವಿರುದ್ಧ ಗಂಭೀರ ಆರೋಪಗಳು – ಜನ ಪ್ರತಿನಿಧಿಗಳ ನಡವಳಿಕೆ ಬಗ್ಗೆ ಸಾರ್ವಜನಿಕರ ಆಕ್ರೋಶ

**ಸಿಹಿ ಕಹಿ ಸುದ್ದಿ,**

**ಉಡುಪಿ :** ಪೆರ್ಡೂರು ಗ್ರಾಮ ಪಂಚಾಯತ್ನ ಉಪಾಧ್ಯಕ್ಷ ದೇವು ಪೂಜಾರಿ ವಿರುದ್ಧ ಕೇಳಿಬಂದಿರುವ ಗಂಭೀರ ಆರೋಪಗಳು ಮತ್ತು ಅವರ ನಡವಳಿಕೆ ಸ್ಥಳೀಯ ರಾಜಕೀಯ ವಲಯದಲ್ಲಿ ಮತ್ತು ಸಾರ್ವಜನಿಕರಲ್ಲಿ ಭಾರೀ ಆಕ್ರೋಶಕ್ಕೆ ಕಾರಣವಾಗಿವೆ. ಸಾರ್ವಜನಿಕವಾಗಿ ಲಭ್ಯವಿರುವ ಮಾಹಿತಿಯ ಪ್ರಕಾರ, ಈ ಹಿಂದಿನರಾಜಕೀಯನಡೆಗಳುಮತ್ತುಪ್ರಸ್ತುತ ನಡೆಯುತ್ತಿರುವ ಅಕ್ರಮಗಳ ಕುರಿತು ಜನರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.



**ಕುದುರೆ ವ್ಯಾಪಾರ ಮತ್ತು ರಾಜಕೀಯ ವೇಷಭೂಷಣ:**

ಆರೋಪಗಳ ಪ್ರಕಾರ, ದೇವು ಪೂಜಾರಿ ಅವರು ಈ ಹಿಂದೆ ಕಾಂಗ್ರೆಸ್ ಪಕ್ಷದಲ್ಲಿದ್ದು, ಪಂಚಾಯತ್ ಚುನಾವಣೆಯಲ್ಲಿ ಪಕ್ಷೇತರವಾಗಿ ಸ್ಪರ್ಧಿಸಿ ಸೋತ ನಂತರ ಮತ್ತೆ ಕಾಂಗ್ರೆಸ್ಗೆ ಸೇರಿದ್ದರು.

ನಂತರದ ಚುನಾವಣೆಯಲ್ಲಿ ಕಾಂಗ್ರೆಸ್ನಿಂದ ಗೆದ್ದು, ಬಿಜೆಪಿ ಬೆಂಬಲಿತರ ಕುದು–ರೆ ವ್ಯಾಪಾರದಲ್ಲಿ ? 5 ಲಕ್ಷ ಪಡೆದು ಅಧ್ಯಕ್ಷರಾಗಿದ್ದರು. ಆನಂತರ ಉಪಾಧ್ಯಕ್ಷ ಸ್ಥಾನವನ್ನು ಅಲಂಕರಿಸಿರುವುದು ಕೂಡ ರಾಜಕೀಯ ವಲಯದಲ್ಲಿ ಚರ್ಚೆಯ ವಿಷಯವಾಗಿದೆ. ಅವರ ಈ ನಡೆಗಳು ರಾಜಕೀಯ ಲಾಭಕ್ಕಾಗಿ ಯಾವುದೇ ಪಕ್ಷ–ಕ್ಕೆ ಸೇರುವ ವ್ಯಕ್ತಿಯಂತೆ ಬಿಂಬಿಸಲ್ಪಟ್ಟಿವೆ ಎಂದು ಆರೋಪಿಸಲಾಗಿದೆ.

**ಅಕ್ರಮ ಮರಳುಗಾರಿಕೆ ಮತ್ತು ಗ್ರಾಮಸ್ಥರ ಆಕ್ರೋಶ:**

ದೇವು ಪೂಜಾರಿ ಅವರು ಪ್ರಸ್ತುತ ಅಕ್ರಮ ಮರಳುಗಾರಿಕೆ ದಂಧೆಯಲ್ಲಿ ತೊಡಗಿ–ಕೊಂಡಿದ್ದಾರೆಂದು ಹೇಳಲಾಗಿದ್ದು, ಪಂಚಾಯತ್ಗೆ ಬರಬೇಕಾಗಿದ್ದ ರಸ್ತೆ ಮತ್ತು ಕಟ್ಟಡ ಕಾಮಗಾರಿಗಳ ಮರಳು ತೆರಿಗೆ ಹಣವನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ ಎಂಬ ಆರೋಪ ಕೇಳಿಬಂದಿದೆ.

**ಅಧಿಕಾರಿಗಳ ಮೇಲೆ ಒತ್ತಡ, ಪೊಲೀಸ್ ಠಾಣೆಗೆ ದೂರು:**

ಅಕ್ರಮ ಮರಳುಗಾರಿಕೆಯನ್ನು ನಿಲ್ಲಿಸಬೇಕಾದ ಜನಪ್ರತಿನಿಧಿಗಳೇ ಅದರಲ್ಲಿ ಶಾಮೀಲಾಗಿದ್ದಾರೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಗ್ರಾಮಪಂಚಾಯತ್ ಸಾಮಾನ್ಯ ಸಭೆಯಲ್ಲಿ ಅಕ್ರಮ ಮರಳುಗಾರಿಕೆ ಮಾಡಬಾರದೆಂದು ಸರ್ವ ಸದಸ್ಯರು ಸರ್ವಾನು ಮತದಿಂದ ನಿರ್ಣಯಿಸಿದ್ದರೂ, ಉಪಾಧ್ಯಕ್ಷರು ಸ್ಥಳೀಯ ಅಭಿವೃದ್ಧಿ ಅಧಿಕಾರಿಗಳಿಗೆ ಹಾಗೂ ಪಂಚಾಯತ್ ಸಿಬಂದಿಗೆ ಬೆದರಿಕೆ ಒಡ್ಡಿ ಅಕ್ರಮಕ್ಕೆ ಸಹಕರಿಸಲು ಒತ್ತಾಯಿಸಿದ್ದಾರೆ ಎಂಬ ಗಂಭೀರ ಆರೋಪ ಕೇಳಿಬಂದಿದೆ. ಈ ಎಲ್ಲಾ ಆರೋಪಗಳು ಮತ್ತು ಸಾರ್ವಜನಿಕರ ಟೀಕೆಗಳಿಂದಾಗಿ, ಉಪಾಧ್ಯಕ್ಷರು ಹಿರಿಯಡ್ಕ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ ಎಂದು ಸಾರ್ವಜನಿಕ ವಲಯಗಳಲ್ಲಿ ತಿಳಿದುಬಂದಿದೆ.

**ಸಾರ್ವಜನಿಕರ ಪ್ರಶ್ನೆ:**

ಜನರಸೇವೆಮಾಡಬೇಕಾದಜನಪ್ರತಿನಿಧಿಗಳು ತಮ್ಮ ತಪ್ಪುಗಳನ್ನು ಸರಿಪಡಿಸಿಕೊಳ್ಳುವ ಬದಲು, ಸಾರ್ವಜನಿಕರ ಟೀಕೆಗಳನ್ನು ವಿರೋಧಿಸಿ ಪೊಲೀಸ್ ಠಾಣೆಗೆ ಹೋಗಿ ದೂರು ನೀಡುವುದು ಎಷ್ಟು ಸರಿ ಎಂದು ಸಾರ್ವಜನಿಕರು ಪ್ರಶ್ನಿಸಿದ್ದಾರೆ.

ಸಮಾಜದಲ್ಲಿ ಗೌರವಯುತ ಸ್ಥಾನದಲ್ಲಿರುವ ಜನಪ್ರತಿನಿಧಿಗಳು ಅಕ್ರಮ ದಂಧೆಗಳಲ್ಲಿ ತೊಡಗಿಸಿಕೊಂಡು, ಅದಕ್ಕೆ ಅಧಿಕಾರಿಗಳು ಮತ್ತು ಸ್ಥಳೀಯ ಪೊಲೀಸರೂ ಬೆಂಬಲ ನೀಡುತ್ತಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. "ಇದೇ ರೀತಿ ಮುಂದುವರಿದರೆ, ಮುಂದಿನ ಚುನಾವಣೆಯಲ್ಲಿ ಇವರಿಗೆ ಸೂಕ್ತ ಉತ್ತರ ನೀಡಲಾಗುವುದು" ಎಂದು ಜನರು ಎಚ್ಚರಿಕೆ ನೀಡಿದ್ದಾರೆ.

ಜಿಲ್ಲೆಯಲ್ಲಿ ನಿಷ್ಠಾವಂತ ಅಧಿಕಾರಿಗಳಿದ್ದರೂ ಇಂತಹ ಅಕ್ರಮಗಳಿಗೆ ಸಹಕಾರ ನೀಡುವುದು ಸರಿಯಲ್ಲ ಎಂದು ಜನರು ಅಭಿಪ್ರಾಯಪಟ್ಟಿದ್ದಾರೆ.

ಈ ವಿಚಾರವು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡುತ್ತಿದ್ದು, ಎಲ್ಲೆಡೆ ತೀವ್ರ ಚರ್ಚೆಗೆ ಒಳಗಾಗಿದೆ.

**ವರದಿ:**
**ಆರತಿ.ಗಿಳಿಯಾರು.ಉಡುಪಿ**

## ರಾಷ್ಟ್ರೀಯ ಸೇವಾ ಯೋಜನಾ ಸಂಸ್ಥಾಪನಾ ದಿನ – ಸೆಪ್ಟೆಂಬರ್ 24 ರಂದು ಆಚರಿಸಿದರು

**ಸಿಹಿ ಕಹಿ ಸುದ್ದಿ,**

**ಮಾನ್ವಿ :** ದಿನಾಂಕ 24-09-2025 ರಂದು ಬಾಷುಮಿಯಾ ಸಾಹುಕಾರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಾನ್ವಿಯಲ್ಲಿ ರಾಷ್ಟ್ರೀಯ ಸೇವಾ ಯೋಜನಾ "ಸಂಸ್ಥಾಪನ ದಿನ" ವನ್ನು ಆಚರಿಸಲಾಯಿತು. ಈ ಕಾರ್ಯಕ್ರಮವನ್ನು ಗಿಡ ನೆಡುವ ಮೂಲಕ ಪ್ರಾರಂಭಿಸಲಾಯಿತು ಮತ್ತು ಕಾರ್ಯಕ್ರಮದಲ್ಲಿ 2024-25 ನೇ. ಸಾಲಿನಲ್ಲಿ 'ರಾಷ್ಟ್ರೀಯ ಸೇವಾ ಯೋಜನಾ ವಾರ್ಷಿಕ ಶಿಬಿರ' ದಲ್ಲಿ ಪಾಲ್ಗೊಂಡ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು.






ಅಧ್ಯಕ್ಷತೆಯನ್ನು ವಹಿಸಿದ ಪ್ರಭಾರಿ ಪ್ರಾಂಶುಪಾಲರಾದ ಶ್ರೀ ಸೈಯದ್ ಮಿನ್ಹಾಜ್–ಉಲ್–ಹಸನ್ ರವರು ಮಾತನಾಡುತ್ತ ವಿದ್ಯಾರ್ಥಿ ಸೇವಾ, ಸಮರ್ಪಣೆ ಮತ್ತು ಸ್ವಚ್ಛತೆ ನಮ್ಮ ಮೂಲ ಮಂತ್ರವಾಗಿಸೋಣ, ನಮ್ಮ ಕಾಲೇಜಿನ ವಿದ್ಯಾರ್ಥಿಗಳು ರಾಜ್ಯ ಮತ್ತು ರಾಷ್ಟ್ರ ಮಟ್ಟದ ಸೇವಾ ನಾಯಕರಾಗ ಬೇಕು ಎಂದು ಹುರಿದುಂಬಿಸಿದರು.

ಈಕಾರ್ಯಕ್ರಮದಪ್ರಾಸ್ತಾವಿಕನುಡಿಯನ್ನುರಾಷ್ಟ್ರೀಯ ಸೇವಾ ಯೋಜನಾ ಘಟಕದ ಸಂಚಾಲಕರಾದ ಡಾ, ಸೈಯದ್ ಮುಜೀಬ್ ಅಹ್ಮದ್ ಅವರು ಮಾತಾನಾಡಿ ಈ ದಿನದ ವಿಶೇಷತೆ, ಇತಿಹಾಸ ಮತ್ತು ರಾ.ಸೇ.ಯೋ. ಯ ಧೇಯ ವಾಕ್ಯ, ಸೇವಾ ಮನೋಭಾವ ಮತ್ತು ಶಿಸ್ತಿನ ಗುಣಗಳನ್ನು ಮೈಗೂಡಿಸಿ ಕೊಳ್ಳಬೇಕೆಂದು ಕರೆ ಕೊಟ್ಟರು.

ಈ ಸಂಧರ್ಭದಲ್ಲಿ ಉಪಸ್ಥಿತರಿದ್ದ ರೆಡ್–ಕ್ರಾಸ್ ಘಟಕ ಸಂಚಾಲಕರಾದ ಶ್ರೀ ಚಂದ್ರು, ಐ.ಕ್ಯೂ.ಎ.ಸಿ. ಸಂಚಾಲಕರಾದ ಶ್ರೀ ಶ್ರೀಧರ, ಸಾಂಸ್ಕೃತಿಕ ಸಂಚಾಲಕರಾದ ಡಾ, ಚನ್ನಬಸವ , ಎನ್.ಸಿ.ಸಿ ಮತ್ತು ರೋವರ್ ಘಟಕದ ಸಂಚಾಲಕರಾದ ಶ್ರೀ ಉಸ್ಮಾನ್ ಬಾಷಾ ಮತ್ತು ಗ್ರಂಥಾಲಯ ಸಂಚಾಲಕಿಯಾದ ಕು. ಹರ್ಷಿತಾ ಅವರೆಲ್ಲಾರು ಸಹ ವಿದ್ಯಾರ್ಥಿಗಳನ್ನು ಉದೇಶಿಸಿ ಮಾತನಾಡಿದರು.

ಈ ಸಂಧರ್ಭದಲ್ಲಿ ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಸುಧಾ. ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಕಾಲೇಜಿನ ವಿದ್ಯಾರ್ಥಿನಿ ಕು.ಸುಶ್ಮಿತಾ ನಿರೂಪಿಸಿದರು, ಸ್ವಾಗತವನ್ನು ಕು.ರೇಣುಕಾ ಮತ್ತು ಕು.ಶಿವಕುಮಾರ್ ವಂದನಾರ್ಪಣೆಯನ್ನು ಮಾಡಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:**
**ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

## ಅದ್ದೂರಿಯಿಂದ ನೆರವೇರಿದ ಶ್ರೀ ಕಾಡಸಿದ್ಧೇಶ್ವರ ಕಳಸೋತ್ಸವ

**ರಬಕವಿ–ಬನಹಟ್ಟಿ :** ಬನಹಟ್ಟಿಯ ಆರಾಧ್ಯ ದೈವ ಶ್ರೀ ಕಾಡಸಿದ್ದೇಶ್ವರ ಜಾತ್ರೆಯ 3ನೇ ಹಾಗೂ ಕೊನೆ ದಿನವಾದ ಇಂದು ಕಾಡಸಿದ್ದೇಶ್ವರ ಕಳಸೋತ್ಸವ ಶ್ರೀ ಕಾಡಸಿದ್ದೇಶ್ವರ ಮಹಾರಾಜ ಕೀ ಜೈ ಎಂಬ ಘೋಷಗಳೊಂದಿಗೆ ನಗರದ ಪ್ರಮುಖ ಬೀದಿಗಳಲ್ಲಿ ವಿಜೃಂಭಣೆಯಿಂದ ನೆರವೇರಿತು.

ಗುರುವಾರದಂದು ನಗರದ ಮಂಗಳವಾರ ಪೇಟೆಯಿಂದ ಪ್ರಮುಖ ಬೀದಿಗಳಲ್ಲಿ ನಡೆದ ಕಳಸೋತ್ಸವ ನಂದಿಕೋಲು, ಕರಡಿ ಮಜಲು, ಸನಾದಿ ಹಾಗೂ ಸಕಲ ವಾದ್ಯಗೋಷ್ಠಿಗಳೊಂದಿಗೆ ಕಾರ್ಯಕ್ರಮ ಅತಿವೈಭವದಿಂದರಾತ್ರಿವರೆಗೂನಡೆಯಿತು. ಇಂದು ಕೂಡಾ ಮಧ್ಯಾಹ್ನ 3 ಗಂಟೆಯಿಂದ ನಗರದ ವಿವಿಧ ಬಡಾವಣೆಗಳಲ್ಲಿ ಪಟಾಕಿ ಸಿಡಿಸುವುದರ ಮೂಲಕ ಕಳಸೋತ್ಸವಕ್ಕೆ ಚಾಲನೆ ದೊರೆಯಿತು. ಮಂಗಳವಾರದಂತೆ ಇಂದು ಕೂಡಾ ಕೋಟ್ಯಾಂತರ ರೂ.ಗಳ ಮದ್ದನ್ನು ಹಾರಿಸುವುದರ ಮೂಲಕ ಭಕ್ತರು ತಮ್ಮ ಹರಕೆಯನ್ನು ಪೂರೈಸಿಕೊಂಡರು. ಪ್ರಮುಖ ಬೀದಿಗಳಲ್ಲಿ ಸುಮಾರು 1 ಕಿ.ಮೀ.ನಷ್ಟು ಸಂಚರಿಸಿ ಸೋಮವಾರ ಪೇಟೆಯ ಶಂಕರ ಜುಂಜಪ್ಪನವರ ನಿವಾಸದವರೆಗೆ ತೆರಳಿ ಮತ್ತೆ ವಾಪಸ್ ರಥೋತ್ಸವದ ಹತ್ತಿರ ತೆರಳಿತು. ಇಂದೂ ಸಹಿತ ಮದ್ದು ಸುಡುವ ಕಾರ್ಯಕ್ರಮ ಜಾತ್ರೆ ದಿನಕ್ಕಿಂತಲೂ ದ್ವಿಗುಣವಾಗಿತ್ತು.



**ಸೂಕ್ತ ಬಂದೋಬಸ್ತ್:** ಶ್ರೀ ಕಾಡಸಿದ್ಧೇಶ್ವರರ ಕಳಸೋತ್ಸವ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಕಳಸದ ಸುತ್ತ ಮುತ್ತಲೂ ಬನಹಟ್ಟಿ ಸಿಪಿಐ ಸಂಜು ಬಳಗಾರ, ಪಿಎಸ್ಐ ಶಾಂತಾ ಹಳ್ಳಿ ಹೆಚ್ಚಿನ ಭದ್ರತೆ ವ್ಯವಸ್ಥೆ ಮಾಡಿದ್ದರು.

ಗಣ್ಯರಾದ ಶ್ರೀಶೈಲ ದಭಾಡಿ, ಶ್ರೀಪಾದ ಬಾಣಕಾರ, ಸಿದ್ದನಗೌಡ ಪಾಟೀಲ, ಭೀಮಶಿ ಮಗದುಮ್, ರಾಜುಗೌಡ ಪಾಟೀಲ,ಮಲ್ಲಪ್ಪ ಜನವಾಡ,ಮಹಾಶಾಂತ ಶೆಟ್ಟಿ, ಶೇಖರ ಸಂಪಗಾಂವಿ, ಶ್ರೀಶೈಲ ಯಾದವಾಡ, ದಾನಪ್ಪ ಹುಲಜತ್ತಿ, ಪಂಡಿತ ಪಟ್ಟಣ, ಸಿದ್ದು ಪಾಟೀಲ, ಚಿದಾನಂದ ಪತ್ತಾರ, ಶೇಖರ ಜವಳಗಿ, ಮಲ್ಲಪ್ಪ ಹೂಲಿ, ರವಿ ಪತ್ತಾರ, ಮಲ್ಲಪ್ಪ ಹೂಲಿ, ಬಾಳು ಗಣೇಶನವರ ಸೇರಿದಂತೆ ಸಾವಿರಾರು ಜನರುಕಳಸೋತ್ಸವದಲ್ಲಿಭಾಗವಹಿಸಿದ್ದರು.

## ರಾಜ್ಯಮಟ್ಟಕ್ಕೆ ಆಯ್ಕೆಯಾದ 'ಚೆಸ್ ಸ್ಪರ್ಧೆ' ವಿಜೇತರು



**ವಿಜಯನಗರ(ಹೊಸಪೇಟೆ):**ನಗರದಒಳಕ್ರೀಡಾಂಗಣ ಸಭಾಂಗಣದಲ್ಲಿ ಜಿಲ್ಲಾಮಟ್ಟದ ಚೆಸ್ ಚಾಂಪಿಯನ್ ಸ್ಪರ್ಧೆಯನ್ನು ಸೋಮವಾರ ಹಮ್ಮಿಕೊಳ್ಳಲಾಗಿತ್ತು. ಚದುರಂಗದ ಆಟದಲ್ಲಿ 5 ತಾಲೂಕಿನ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು. 14 ವರ್ಷದ ಕೆಳಗಿನ ಸುಮಾರು 23 ಬಾಲಕ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.ಆಯ್ಕೆಪ್ರಕ್ರಿಯೆನಡೆದುಸ್ಪರ್ಧೆಯಲ್ಲಿ ವಿಜೇತರಾದರು.

ಸರಕಾರಿ ಆದರ್ಶ ವಿದ್ಯಾಲಯ ಮೂವರು ವಿದ್ಯಾರ್ಥಿಗಳು ವೃಷಭ,ಬಿ.ಧೀರಜ್.ಸಾತ್ವಿಕ್ ಮತ್ತು ನಗರದ ಜೆಸಿಸ್ ಶಾಲೆಯ ಸಮರ್ಥ ಹಾಗೂ ಹಗರಿಬೊಮ್ಮನಹಳ್ಳಿ ತಾಲೂಕಿನ ಮನು,ಇವರೆಲ್ಲ ರಾಜ್ಯ ಮಟ್ಟಕ್ಕೆ ಆಯ್ಕೆಯಾದರು.

ಸರ್ಕಾರಿ ಆದರ್ಶ ಶಾಲೆಯ ದೈಹಿಕ ಶಿಕ್ಷಕರಾದ ರವಿಕಿರಣ ಅವರು ನಿರಂತರ ಪರಶ್ರಮದಿಂದ ಪ್ರತಿವರ್ಷ ರಾಜ್ಯಮಟ್ಟಕ್ಕೆ ತಮ್ಮ ಶಾಲಾ ಮಕ್ಕಳನ್ನು ಪ್ರತಿನಿಧಿಸುತ್ತಾರೆ.ಶಾಲೆಯ ಮಕ್ಕಳ ಪ್ರತಿಭೆಯನ್ನು ಗುರುತಿಸಿ ತರಬೇತಿ ನೀಡಿ ನಿರಂತರ ಶ್ರಮವನ್ನು ವಹಿಸಿದ್ದಾರೆ.

ಈ ವೇಳೆ ಶ್ರೀಮತಿ ಸುಲೋಚನಾ ಬಾಯಿ, ಸರ್ಕಾರಿ ಆದರ್ಶವಿದ್ಯಾಲಯಮುಖ್ಯೋಪಾಧ್ಯಾಯರುಶಾಲಾ ಶಿಕ್ಷಕರು ಹಾಗೂ ಪಾಲಕರು ದೇಶಕ್ಕೆ ಕೀರ್ತಿತರಲೆಂದು ಚಾಂಪಿಯನ್ ಹಾಗಿ ಹೊರಹೊಮ್ಮಲು ಅಭಿನಂದಿಸಿ ಮಕ್ಕಳನ್ನು ಪ್ರೋತ್ಸಾಹಿಸಿದರು.

## ಲಕ್ಷಕ್ಕೂ ಅಧಿಕ ಭಕ್ತರು ಸಾಕ್ಷಿಯಾದ 'ಬಂಡಿಗಣಿಶ್ರೀಗಳ ಉತ್ಸವ'





**ರಬಕವಿ–ಬನಹಟ್ಟಿ :** ಕಣ್ಣು ಹಾಯಿಸಿದಷ್ಟು ಜನವೋ ಜನ.. ನಾಡಿನ ನೂರಾರು ಕಲಾವಿದ–ರಿಂದ ವಿವಿಧ ಕಲಾ ತಂಡಗಳಿಂದ ಪ್ರದರ್ಶನದೊಂದಿಗೆ ನಡೆದ ಭವ್ಯ ಮೆರವಣಿಗೆ 'ನ ಭೂತೋ.. ನ ಭವಿಷ್ಯತೆ' ಎಂಬಂತೆ ಸಾಕ್ಷಿಯಾಗುವ ಮೂಲಕ ಬಂಡಿಗಣಿಯ ಬಸವಗೋಪಾಲ ನೀಲಮಾಣಿಕ ಮಠದ ದಾನೇಶ್ವರಶ್ರೀಗಳ 'ಅಮೃತ ಮಹೋತ್ಸವ' ಕಾರ್ಯಕ್ರಮ ದಾಖಲೆ ನಿರ್ಮಿಸಿತು.

ಗುರುವಾರ ರಬಕವಿಯ ಭಗೀರಥ ವೃತ್ತದಿಂದ ಬನಹಟ್ಟಿಯ ನೂಲಿನ ಗಿರಣಿವರೆಗೆ ಸುಮಾರು 5 ಕಿ.ಮೀ.ನಷ್ಟು ನಡೆದ ಭವ್ಯ ಮೆರವಣಿಗೆಯುದ್ದಕ್ಕೂ ಹಾಡು, ಕಲಾ ತಂಡ, ನೃತ್ಯ, ಗೊಂಬೆ ಕುಣಿತದೊಂದಿಗೆ ಭಕ್ತರು ಕೋಲಾಟದೊಂದಿಗೆ ತಮ್ಮ ಕಲಾ ಸಿರಿವಂತಿಕೆ ತೋರಿಸುವಲ್ಲಿ ಯಶಸ್ವಿಯಾದರು.

ಸಚಿವ ಆರ್.ಬಿ. ತಿಮ್ಮಾಪೂರ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿ, 'ಭಕ್ತರೇ ಮಠದ ದೊಡ್ಡ ಆಸ್ತಿ' ಎಂಬುದಕ್ಕೆ ಬಂಡಿಗಣಿಮಠ ಇಂದು ಸಾಕ್ಷಿಯಾಗಿ ನಿಂತಿದೆ ಎಂದರು.

ದಾನೇಶ್ವರಶ್ರೀಗಳು ಮಾತನಾಡಿ, ಬಸವಣ್ಣನವರ ನುಡಿದಂತೆ ನಡೆ ಎನ್ನುವ ತತ್ವ ಇಂದಿನ ಸಮಾಜ–ಕ್ಕೆ ಅಗತ್ಯವಾಗಿದೆ. ಆಧ್ಯಾತ್ಮಿಕ ಶಕ್ತಿ, ತಪೋಶಕ್ತಿ, ಅನುಷ್ಠಾನದಿಂದ ಮಾತ್ರ ಪವಾಡ ಮಾಡಲು ಸಾಧ್ಯ. ಸಮಾಜವೇ ತಂದೆ, ತಾಯಿಗಳು ಎಂಬ ಭಾವನೆ ಮಠಾಧೀಶರಲ್ಲಿ ಮೂಡಬೇಕು. ಭಕ್ತರು ಮಾತೃಸ್ವರೂಪಿಗಳು ಜಂಗಮ ಪರಂಪರೆ, ದಾಸೋಹಗಳು ಬಂಡಿಗಣಿಮಠದಿಂದ ದಿನ ನಿತ್ಯ ಜರುಗುತ್ತಿದೆ.

ಎಂದಿಗೂ ನಿಲ್ಲುವದಿಲ್ಲವೆಂದರು. ಇಂದಿನ ಭವ್ಯ ಮೆರವಣಿಗೆ ಭಗವಂತನಿಗೆ ಸಲ್ಲುತ್ತದೆ. ನಾನು ಮಾಡಿರುವದು ಏನೂ ಇಲ್ಲ. ಎಲ್ಲವೂ ಆ ದೇವನಿಂದಲೇ ನಡೆಯುತ್ತಿದೆ ಎಂದು ಮೌನವಾದರು.

**ಜೆಸಿಬಿ ಮೂಲಕ ಹೂವಿನ ಮಳೆ:** ರಸ್ತೆಯುದ್ದಕ್ಕೂ ಹೂವಿನ ಮಳೆ ಸುರಿದರೆ ಅಲ್ಲಲ್ಲಿ ವೃತ್ತಗಳ ಪ್ರದೇಶಗಳಲ್ಲಿ ಜೆಸಿಬಿಗಳ ಮೇಲೆ ನಿಂತು ಪುಷ್ಪವೃಷ್ಟಿ ಸು–ರಿಯಿತು. ಗುಲಾಬಿ, ಸೇವಂತಿ, ಚಂಡು ಹೂಗಳ ಪಕಳೆಗಳಲ್ಲಿ ಮುಳುಗಿ ಹೋದ ರಸ್ತೆ ಹಳದಿ, ಕೆಂಪುಮಯವಾಗಿತ್ತು.

**ಹರಿದು ಬಂದ ಭಕ್ತಸಾಗರ:**

ಕರ್ನಾಟಕ, ಮಹಾರಾಷ್ಟ್ರ ಹಾಗು ಆಂಧ್ರ ಪ್ರದೇಶದಿಂದ ಲಕ್ಷಕ್ಕೂ ಅಧಿಕ ಭಕ್ತರು ಉತ್ಸವದಲ್ಲಿ ಭಾಗಿಯಾಗಿದ್ದರು. ದೇಶೀಯ ಸೊಗಡಿನ ಸಾಂಸ್ಕೃತಿ–ಕ ವೇಷ ಭೂಷಣಗಳು ಮೆರವಣಿಗೆಯುದ್ದಕ್ಕೂ ಕಲಾ ಸಿರಿವಂತಿಕೆಗೆ ಪಾತ್ರವಾಗಿದ್ದವು.

ಹಿರೇಮಠದ ಶರಣಬಸವ ಶಿವಾಚಾರ್ಯರು ಸಾನಿಧ್ಯ ವಹಿಸಿದ್ದರು.

ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ, ದೇವರಾಜ ಅರಸು ಹಿಂದುಳಿದ ವರ್ಗಗಳ ನಿಗಮದ ಅಧ್ಯಕ್ಷ ಕೀರ್ತಿ ಗಣೇಶ ಎನ್.ಜಿ, ಬಿಜೆಪಿ ಯುವ ಮುಖಂಡ ವಿದ್ಯಾಧರ ಸವದಿ ಸೇರಿದಂತೆ ಅನೇಕ ಗಣ್ಯರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಸಂಜೆ 6 ರಿಂದ ಸರಿಗಮಪ ವಿಜೇತೆ ಕು.ಶಿವಾನಿಶಿವದಾಸಸ್ವಾಮಿಹಾಗು ಗದಗನ ಮಹಿಬೂಬಾಸಾಬರಿಂದ ಸಂಗೀತ ಸುಧೆ ಹಾಗು ರಾತ್ರಿ 9 ಕ್ಕೆ ಸ್ವರಾಜಶೆಟ್ಟಿ ಅಭಿನಯದ ಶಿವಧೂಗ ಗೂಳಿಗ ಪ್ರದರ್ಶನ ಜರುಗಿತು.

## ಪ್ರಧಾನಿ ನರೇಂದ್ರ ಮೋದಿ ಜನ್ಮ ದಿನಾಚರಣೆ



**ಮಹಾಲಿಂಗಪುರ :** ದೇಶದ ಪ್ರಧಾನಿ ನರೇಂದ್ರ ಮೋದಿ ಅವರ 75 ನೇ ಹುಟ್ಟು ಹಬ್ಬದ ನಿಮಿತ್ಯ ಸ್ಥಳೀಯ ಬಿಜೆಪಿ ಮುಖಂಡರು ಸರ್ಕಾರಿ ಸಮುದಾಯ ಆಸ್ಪತ್ರೆಯಲ್ಲಿದ್ದ ರೋಗಿಗಳಿಗೆ ಹಾಲು ಹಣ್ಣು ವಿತರಿಸುವ ಮೂಲಕ ಜನ್ಮದಿನವನ್ನು ಸಂಭ್ರಮದಿಂದ ಆಚರಿಸಿದರು.

ಬಿಡಿಸಿಸಿ ಬ್ಯಾಂಕಿನ ನಿರ್ದೇಶಕ ಬಸನಗೌಡ ಪಾಟೀಲ, ರಾಜ್ಯ ಬಿಜೆಪಿ ನೇಕಾರ ಮುಖಂಡ ಮನೋಹರ ಶಿರೋಳ, ಬಿಜೆಪಿ ನಗರ ಘಟಕ ಅಧ್ಯಕ್ಷ ಶಂಕರಗೌಡ ಪಾಟೀಲ,

ಮುಖಂಡರಾದ ಡಾ. ಅಶೋಕ ದಿನ್ನಿಮನಿ, ಸಾಗರ ಮಠದ, ಅರ್ಜುನ ಮೋಪಗಾರ, ಶಿವಬಸು ಗೌಂಡಿ, ಮಹಾಲಿಂಗಪ್ಪ ಲಾತೂರ, ಮಲ್ಲು ದಲಾಲ, ಆನಂದ ಪವಾರ ಸೇರಿದಂತೆ ಬಿಜೆಪಿ ಮುಖಂಡರು, ಪುರಸಭೆ ಸದಸ್ಯರು, ಕಾರ್ಯಕರ್ತರು ಹಾಜರಿದ್ದರು.

# ತುತ್ತಿಗೆ ಹತ್ಮಂದ್ಯಾಗ್ಲಿ ಎಂದವರೂ ಲಿಂಗವಂತರೇ : ಹಿರಿಶಾಂತವೀರ ಸ್ವಾಮೀಜಿ ಅಭಿಮತ




**ಕೊಪ್ಪಳ** : 'ಊಟಕ್ಕೆ ಕುಳಿತಾಗ, ಊಟ ಮಾಡೋಣ ಬನ್ನಿ? ಎಂದು ಕರೆದರೆ ಅವರೆಲ್ಲ ಖಂಡಿತ ಲಿಂಗಾಯತರು. ಕರೆದೊಡನೇ ಹೋಗದೆ ಅದಕ್ಕೆ ಪ್ರತಿಯಾಗಿ ತುತ್ತಿಗೆ ಹತ್ಮಂದ್ಯಾಗ್ಲಿ? ಎಂದರೆ ಅವರು ಕೂಡ ಲಿಂಗವಂತರೇ' ಎಂದು ಹೂವಿನಹಡಗಲಿಯ ಗವಿಸಿದ್ಧೇಶ್ವರ ಶಾಖಾಮಠದ ಹಿರಿಶಾಂತವೀರ ಸ್ವಾಮೀಜಿ ಹೇಳಿದರು.

ನಗರದಲ್ಲಿ ಭಾನುವಾರ ನಡೆದ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕೆಪಿಟಿಸಿಎಲ್) ಮತ್ತು ಎಸ್ಕಾಂಗಳ ವೀರಶೈವ ಲಿಂಗಾಯತರ ವೇದಿಕೆಯ 3ನೇ ರಾಜ್ಯ ಸಮಾವೇಶದಲ್ಲಿ ಅವರು ಆಶೀರ್ವಚನ ನೀಡಿ 'ನಾಡಿನ ಮಠಗಳು ಅಪಾರ ವಿದ್ಯಾರ್ಥಿಗಳಿಗೆ ಅನ್ನ, ಅಕ್ಷರ ದಾಸೋಹ ನೀಡುತ್ತಿವೆ ಎಂದರೆ ಅದು ಸಮಾಜದ ಜಾಗೃತಿಯಲ್ಲಿ ತೊಡಗಿರುವ ನಿಮ್ಮಂತವರಿಂದಲೇ ಸಾಧ್ಯವಾಗಿದೆ. ಅಂತಹ ಮಠಗಳಲ್ಲಿ ಗವಿಮಠವೂ ಒಂದಾಗಿದೆ' ಎಂದು ಪ್ರಶಂಸಿಸಿದರು.

ಕಡಲಬಾಳದಲ್ಲಿ ಆಸ್ತಿ ಮಾರಿ ಈ ಭಾಗದ ಮಕ್ಕಳಿಗಾಗಿ ಮೊಟ್ಟ ಮೊದಲ ಶಿಕ್ಷಣ ಸಂಸ್ಥೆ ಕಟ್ಟಿ ಬೆಳೆಸಿದವರು ಗವಿಮಠದ ಮರಿಶಾಂತವೀರ ಶಿವಯೋಗಿಗಳು. ಮಕ್ಕಳ ಅನ್ನ, ಅಕ್ಷರ ದಾಸೋಹಕ್ಕಾಗಿ ಸಾಕಷ್ಟು ತ್ಯಾಗಗಳನ್ನು ಗವಿಮಠ ಮಾಡುತ್ತಲೇ ಬಂದಿರುವುದು ಈ ನಾಡಿನ ಸುದೈವ. ಇಲ್ಲಿನ ಭಕ್ತರೂ ಕೂಡ ಅವರ ಸಂಕಲ್ಪಕ್ಕೆ ಜೊತೆಗೂಡಿರುವುದು ಗಮನಾರ್ಹ ವಿಷಯ. ನಾನೂ ಬೆಳೆಯಬೇಕು, ನನ್ನ ಸುತ್ತಲಿನ ಪರಿಸರವೂ ಬೆಳೆಯಬೇಕು ಎಂಬುದು ವೀರಶೈವ ಲಿಂಗಾಯತರ ಗುಣ. ಮಠ, ಮಂದಿರಗಳ ಕಾರ್ಯ ನಿರ್ವಹಣೆಗೆ ಲಿಂಗಾಯತ ಧರ್ಮದ ಈ ಗುಣವೇ ಪ್ರೇರಣೆಯಾಗಿದೆ ಎಂದರೆ ತಪ್ಪಾಗಲಾರದು' ಎಂದು ಮಾರ್ಮಿಕವಾಗಿ ನುಡಿದರು.

ವೀರಶೈವ ಲಿಂಗಾಯತ ಧರ್ಮದ ನೀತಿ, ತತ್ವಗಳು ಇಲ್ಲಿ ನೆರೆದಿರುವ ಮುಖಗಳಲ್ಲಿ ಕಾಣುತ್ತಿವೆ. ಜಾತಿ, ಬೇಧ, ಭಾವ ಮಾಡದೆ ಎಲ್ಲರೂ ನನ್ನ ಮಕ್ಕಳು ಎಂದು ಸಲುಹಿದ ಸಮಾಜ ನಮ್ಮದು. ಸಾಕಷ್ಟು ತಾಳ್ಮೆ, ಸಹಿಷ್ಣುತೆಯನ್ನು ಮೈಗೂಡಿಸಿಕೊಂಡಿರುವ ವೀರಶೈವರ ನಡೆ ನಾಡಿಗೆ ಮಾದರಿಯಾಗಿದೆ. ವಿದ್ಯುತ್ ನಿಗಮದ ನೌಕರರು ಸಾಕಷ್ಟು ಶ್ರಮಜೀವಿಗಳು. ತಮ್ಮ ಮನೆಯ ದೀಪದ ಬಗೆಗೆ ತಲೆಕೆಡಿಸಿಕೊಳ್ಳದ ಅವರು ಸದಾ ಪರರ ಮನೆ, ಮನ ಬೆಳಗುವ ಚಿಂತನೆಯಲ್ಲೇ ತೊಡಗಿಕೊಂಡಿರುತ್ತಾರೆ' ಎಂದು ಹೇಳಿದರು.

ಹುಬ್ಬಳ್ಳಿಯ ಹೆಸ್ಕಾಂನ ಹಣಕಾಸು ನಿರ್ದೇಶಕ ಪ್ರಕಾಶ ಪಾಟೀಲ್ ಮಾತನಾಡಿ, 'ವೀರಶೈವ ಸಮಾಜ ಪ್ರಪಂಚಕ್ಕೆ ಉನ್ನತ ಕೊಡುಗೆಗಳನ್ನು ನೀಡಿದೆ. ಬಸವಣ್ಣನವರ ಕಾಯಕವೇ ಕೈಲಾಸ ಎಂಬ ತತ್ವ ಇಂದಿಗೂ ಚಾಲನೆಯಲ್ಲಿದೆ. ಆ ತತ್ವ ಪರಿಪಾಲಿಸಿದವರನ್ನ ಎತ್ತರಕ್ಕೆ ಬೆಳೆಸುತ್ತದೆ ಎಂಬುದು ಹಲವಾರು ನಿದರ್ಶನಗಳ ಮೂಲಕ ಸಾಬೀತಾಗುತ್ತಲೇ ಇದೆ. ಸಮಾನತೆ ಮತ್ತು ಸೇವೆ ಎಂಬ ಮತ್ತೆರಡು ತತ್ವಗಳೂ ವೀರಶೈವ ಲಿಂಗಾಯತದ ಕೊಡುಗೆಗಳೇ ಆಗಿವೆ' ಎಂದರು.

ಕೆಪಿಟಿಸಿಎಲ್ ಹಾಗೂ ಎಸ್ಕಾಂಗಳ ವೀರಶೈವ ಲಿಂಗಾಯತರ ವೇದಿಕೆಯ ರಾಜ್ಯಾಧ್ಯಕ್ಷ ಬಿ.ರು. ಪ್ರಕಾಶ, ಶಿವಮೊಗ್ಗದ ಜಿಲ್ಲಾಧ್ಯಕ್ಷ ಶಶಿಧರ, ಹೆಸ್ಕಾಂನ ತಾಂತ್ರಿಕ ನಿರ್ದೇಶಕ ಜಗದೀಶ್, ಬೆಸ್ಕಾಂನ ಹಣಕಾಸು ನಿರ್ದೇಶಕ ಮಹಾದೇವ, ಸಂಘಟನಾ ಕಾರ್ಯದರ್ಶಿ ಟಿ.ಎಂ. ಶಿವಪ್ರಕಾಶ, ಬಾಗಲಕೋಟೆ ಜಿಲ್ಲಾಧ್ಯಕ್ಷ ಕೆ.ಜಿ.ಹಿರೇಮಠ, ಮುನಿರಾಬಾದ್‌ನ ಅಧೀಕ್ಷಕ ಎಂಜಿನಿಯರ್ ಎಸ್.ಎಚ್.ಬಸವರಾಜ್, ಕೋಶಾಧ್ಯಕ್ಷ ಸಿ.ಪಿ.ಮಂಜುನಾಥ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು. ವೇದಿಕೆಯ ಪ್ರಧಾನ ಕಾರ್ಯದರ್ಶಿ ಗುರಯ್ಯಮಠ ವರದಿ ವಾಚಿಸಿದರು. ವೀರೇಶ್ ಪ್ರಾರ್ಥಿಸಿದರು. ಸ್ವಾಗತ ಸಮಿತಿ ಕಾರ್ಯದರ್ಶಿ ಗಿರೀಶ್ ಮೈಲಿ ಸ್ವಾಗತಿಸಿದರು.

# ಉತ್ತಮ ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ



**ಕೊಪ್ಪಳ:** ನಗರದ ಗೌರಿಶಂಕರ ದೇವಸ್ಥಾನದ ಮಹಿಳಾ ಮಂಡಲದ ವತಿಯಿಂದ ಶಿಕ್ಷಕರಾದ ಬಾಲನಾಗಮ್ಮ, ಸುಂಧಿಂದ್ರ ದೇಸಾಯಿ, ವಿಜಯಕುಮಾರ ಪದಕಿ, ಗಾಯತ್ರಿ, ಲತಾ ಮೇಟಿ, ಶೀಲಾ ಹಲಗೇರಿ ಅವರಿಗೆ ಉತ್ತಮ ಶಿಕ್ಷಕರ ಪ್ರಶಸ್ತಿ ನೀಡಿ ಗೌರವಿಸಿದರು.

ಈ ಸಮಯದಲ್ಲಿ ವಕೀಲರಾದ ಮಲ್ಲಿಕಾರ್ಜುನ ಸಜ್ಜನ, ವಿ.ಎಂ.ಬೂಸನೂರಮಠ, ಸಂಘದ ಅಧ್ಯಕ್ಷರಾದ ಗೌರಿ ಅಂಬರೇಶ, ಉಪಾಧ್ಯಕ್ಷರಾದ ಶೋಭಾ ಸೊಪ್ಪಿಮಠ, ಸರಸ್ವತಿ ಕುರುಗೋಡ, ಭಾಗ್ಯ, ಕಿರಣಕುಮಾರ, ಗುರುರಾಜ ಕುಲಕರ್ಣಿ, ವಿಶ್ವನಾಥ, ಅರವಿಂದ ಪಾಟೀಲ, ಕೊಟ್ರೇಶ ಹೈದ್ರಿ ಮುಂತಾದವರು ಹಾಜರಿದ್ದರು. ಕಾರ್ಯಕ್ರಮವನ್ನು ಸೌಮ್ಯ ಸಜ್ಜನ ನಿರೂಪಿಸಿದರು. ಪೂಜಾ ಕುರುಗೋಡ ಸ್ವಾಗತಿಸಿ, ದೀಪಾ ಬಳ್ಳಾಬಳ್ಳಿ ವಂದಿಸಿದರು.

# ಅಸೋಸಿಯೇಷನ್ ಕಚೇರಿ: ಇಂಜಿನಿರ್ಸ್ ದಿನಾಚರಣೆ



**ಕೊಪ್ಪಳ** : "ಸಿವಿಲ್ ಇಂಜಿನಿರ್ಸ್ ಅಂಡ್ ಅರ್ಕಿಟೆಕ್ಟ್ಸ್ ಅಸೋಸಿಯೇಷನ್" ವತಿಯಿಂದ ಇಂಜಿನಿರ್ಸ್ ದಿನಾಚರಣೆಯನ್ನು ಇಂಜಿನಿಯರ್ ಅಸೋಸಿಯೇಷನ್ ಕಚೇರಿಯಲ್ಲಿ ನಡೆಸಲಾಯಿತು

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಸೋಸಿಯೇಷನ್

ಅಧ್ಯಕ್ಷರಾದ ಶ್ರೀ ಚೆನ್ನಕೇಶವ ರವರು ವಹಿಸಿದ್ದರು ಹಾಗೂ ಅತಿಥಿಗಳಾಗಿ ಡಾಕ್ಟರ್ ಬಿ ವಿ ಮುದ್ಗಲ್, ಚಂದ್ರಶೇಖರಯ್ಯ ಸೊಪ್ಪಿಮಠ, ಶ್ರೀ ಬಸವರಾಜ್ ಗೌರಿಮಠ, ಬಸವರಾಜ್ ದೇವಪುರ ಭಾಗವಹಿಸಿದ್ದರು

ಈ ಕರ್ಯಕ್ರಮದಲ್ಲಿ ಅಸೋಸಿಯೇಷನ್ ಅಭಿಯಂತರರಾದ ಚಂದ್ರಶೇಖರ್ ಪಾಟೀಲ್ ಅವರು ಮಾತನಾಡಿ ಸರ್ ಎಂ ವಿಶ್ವೇಶ್ವರಯ್ಯನವರು" ಈ ನಾಡಿಗೆ ನೀಡಿದ ಕೊಡುಗೆಗಳನ್ನು ಸ್ಮರಿಸಿ ವಿಶ್ವೇಶ್ವರಯ್ಯನವರ ಜನ್ಮದಿನವನ್ನು ಇಂಜಿನಿಯರ್ ದಿನವನ್ನಾಗಿ ಆಚರಣೆ ಮಾಡುತ್ತಿರುವುದರ ಬಗ್ಗೆ ವಿಸ್ತಾರವಾಗಿ ಮಾತನಾಡಿದರು

ಕೊನೆಯದಾಗಿ ಅಧ್ಯಕ್ಷೆಯ ಭಾಷಣ ಮಾಡಿದ ಚೆನ್ನಕೇಶವರವರು– ಸರ್ ಎಂ ವಿಶ್ವೇಶ್ವರಯ್ಯನವರು ನೀಡಿದ ಮೌಲ್ಯಗಳನ್ನ ಮಾದರಿಗಳನ್ನ ಎಲ್ಲಾ ಇಂಜಿನಿರ್ಸ್‌ಗಳು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಅವರ ದಾರಿಯಲ್ಲಿ ನಡೆಯಬೇಕೆಂದು ಅವರ ಹಾಗೆ ಮಾದರಿಯಾಗಬೇಕೆಂದು ಹೇಳಿದರು

ಕರ್ಯಕ್ರಮದ ನಂತರ ಅಸೋಸಿಯೇಷನ್ ಸಿಬ್ಬಂದಿ ಹಾಗೂ ಖಾಸಗಿ ಕಂಪನಿ ಸಿಬ್ಬಂದಿಯವರು ಎಲ್ಲರೂ ಸೇರಿ "ಕೊಪ್ಪಳ ನಗರದಲ್ಲಿ ಸಸಿಗಳನ್ನು" ನೆಡುವ ಮುಖಾಂತರವಾಗಿ ಇಂಜಿನಿಯರ್ ದಿನವನ್ನು ರ್ಥಪರ್ಣವಾಗಿ ಆಚರಿಸಲಾಯಿತು

ಈ ಕರ್ಯಕ್ರಮದಲ್ಲಿ ಎಲ್ಲಾ ಕಂಪನಿಯ ಸಿಬ್ಬಂದಿಯವರು ಭಾಗವಹಿಸಿದ್ದು ಕರ್ಯಕ್ರಮದ ವಿಶೇಷವಾಗಿತ್ತು

ಕರ್ಯಕ್ರಮದಲ್ಲಿ "ಇಂಜಿನಿಯರ್ ಅಸೋಸಿಯೇಷನ್ ಅಧ್ಯಕ್ಷರಾದ ಚನ್ನಕೇಶವ, ಜಾಯಿಂಟ್ ಸೆಕ್ರೆಟರಿ ಮಹೇಶ್ ತಾವರಗೆರೆ, ಹಿರಿಯ ಇಂಜಿನಿಯರ್ ಗಳಾದ ಪಂಪಾಪತಿ, ಖಾಲಿದ್ ಛದಘುಖಿ, ಪ್ರಮೋದ್, ಆಕಾಶ್ ಜಢದರಢಕಢಡಿ, ಬಸವರಾಜ್ ಮಸ್ಕಿ, ಚಂದ್ರಶೇಖರ್ ಪಾಟೀಲ್, ಇಂಜಿನಿಯರ್ ಅನುರಾಧ, ಮೀಡಿಯಾ ಕನ್ವೀನರ್ ಕಲೀಮ್ ಖಾನ್, ಹಾಗೂ ಎಲ್ಲಾ ಅಸೋಸಿಯೇಷನ್ ಸದಸ್ಯರು ಭಾಗವಹಿಸಿದ್ದರು

# ಜವಾಬ್ದಾರಿಯಿಂದ ನೈಜ ಸುದ್ದಿ ನೀಡಿ: ಸಚಿವ ಶಿವರಾಜ ತಂಗಡಗಿ ಸಲಹೆ



**ಕಾರಟಗಿ:** 'ಪ್ರಜಾಪ್ರಭುತ್ವದ 4ನೇ ಕಂಬದಂತೆ ಪತ್ರಿಕೋದ್ಯಮ ಕೆಲಸ ಮಾಡುತ್ತಿದೆ. ಪತ್ರಕರ್ತರು ತಮ್ಮ ಜವಬ್ದಾರಿಯನ್ನು ಅರಿತು ವಾಸ್ತವಾಂಶವನ್ನೇ ಬಿಂಬಿಸುವ, ಪರಿಣಾಮ ಬೀರುವ ಸ್ಪಷ್ಟ ಸುದ್ದಿಗಳನ್ನೇ ಮಾಡಬೇಕು. ಸರ್ಕಾರದ ಕಣ್ತೆರೆಸುವ, ಸರ್ಕಾರವನ್ನೇ ಬದಲಾಯಿಸುವ ಶಕ್ತಿ ಪತ್ರಿಕೆಗಳಿಗಿದ್ದು ವಸ್ತುನಿಷ್ಠ ವರದಿ ನೀಡಬೇಕು' ಎಂದು ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಹೇಳಿದರು.

ಪಟ್ಟಣದ ಗ್ರಾಮೀಣ ಸಂತೆ ಮೈದಾನದಲ್ಲಿ ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ನೂತನ ಪತ್ರಿಕಾ ಭವನವನ್ನು ಭಾನುವಾರ ಉದ್ಘಾಟಿಸಿ ಮಾತನಾಡಿದರು. ಅನೇಕ ಐಎಎಸ್, ಐಪಿಎಸ್, ಹಿರಿಯ ಅಧಿಕಾರಿಗಳನ್ನು ಸಂಪರ್ಕಿಸಿದಾಗ ನಮ್ಮ ಯಶಸ್ಸಿಗೆ 'ಪ್ರಜಾವಾಣಿ' ಪತ್ರಿಕೆ ಕಾರಣವಾಗಿದೆ. ಸ್ಪರ್ಧಾತ್ಮಕ ಪರೀಕ್ಷೆಯನ್ನು ಸಮರ್ಥವಾಗಿ ಎದುರಿಸಿ, ಯಶ ಸಾಧಿಸಲು ಪತ್ರಿಕೆ ತುಂಬಾ ನೆರವಾಗಿದೆ. ಪುಟ ತುಂಬಿಸಲು ರೋಚಕ ಸುದ್ದಿ ಪ್ರಕಟಿಸುವುದು ಪತ್ರಿಕೆಗಳ ಕೆಲಸವಲ್ಲ. ಕೆಲ ಪತ್ರಿಕೆಗಳು ಇದನ್ನು ಚಾಚೂತಪ್ಪದೇ ಪಾಲಿಸುತ್ತಿರುವುದು ಅವುಗಳ ಘನತೆ ಹೆಚ್ಚಿಸಿದೆ' ಎಂದರು. ಪ್ರಮುಖರಾದ ಶಿವರೆಡ್ಡಿ ನಾಯಕ, ಬಿಲ್ಗಾರ ನಾಗರಾಜ್ ಮಾತನಾಡಿದರು. ಸಾನ್ನಿಧ್ಯ ವಹಿಸಿದ್ದ ಹಿರೇಮಠದ ಮರುಳಸಿದ್ದಯ್ಯಸ್ವಾಮಿ ಮಾತನಾಡಿ, 'ಸಮಾಜದ ಅಂಕುಡೊಂಕು ತಿದ್ದುವ ಪತ್ರಕರ್ತರು ತಮ್ಮ ಜವಬ್ದಾರಿತನ ಅರಿತು ಸುದ್ದಿ ಮಾಡಬೇಕು. ಸುದ್ದಿ ಸಮಾಜದ, ಜನಪ್ರತಿನಿಧಿಗಳ, ಅಧಿಕಾರಿಗಳ ಕಣ್ತೆರೆಸುವಂತಿರಬೇಕು' ಎಂದರು.

ರಾಜ್ಯೋತ್ಸವ ಪ್ರಶಸ್ತಿ ಪಡೆದ ಎ. ಜಿ. ಕಾರಟಗಿ ಅವರನ್ನು ಸನ್ಮಾನಿಸಲಾಯಿತು. ಕಾರ್ಯನಿರತ ಪತ್ರಕರ ಸಂಘದ ಅಧ್ಯಕ್ಷ ಸಿದ್ದನಗೌಡ ಹೊಸಮನಿ ಅಧ್ಯಕ್ಷತೆ ಹಿಸಿದ್ದರು.

ಈಚೆಗೆ ನಿಧನರಾಗಿದ್ದ ಶರಣೇಗೌಡ ಗೊರೇಬಾಳಗೆ ಶ್ರದ್ಧಾಂಜಲಿ ಸಲ್ಲಿಸಿ, ಮೌನ ಆಚರಿಸಲಾಯಿತು. ಪತ್ರಕರ್ತ ಕೊಟ್ಯಾಳ ಶರಣಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಪುರಸಭೆ ಅಧ್ಯಕ್ಷೆ ರೇಖಾ ರಾಜಶೇಖರ ಆನೇಹೊಸೂರು, ಉಪಾಧ್ಯಕ್ಷೆ ದೇವಮ್ಮ ಗಂಗಪ್ಪ, ಮುಖ್ಯಾಧಿಕಾರಿ ಸಾಬಣ್ಣ ಕಟ್ಟಿಕಾರ್, ಸಿಡಿಪಿ ವಿರುಪಾಕ್ಷಿ, ಪತ್ರಕರ್ತರಾದ. ಎಚ್.ಚಾಂದಸಿಂಗ್, ದಿಗಂಬರ್ ಎನ್. ಕುರ್ಡೇಕರ್ ಪ್ರಮುಖರಾದ ಮೌನೇಶ ಡಢೇಸೂಗೂರು, ಎನ್. ಶ್ರೀನಿವಾಸ, ಅಯ್ಯಪ್ಪ ಉಪ್ಪಾರ, ನಾಗರಾಜ್ ಅರಳಿ, ಮಹ್ಮದ್ ರಫಿ, ಶಶಿಧರಗೌಡ, ಚನ್ನಬಸಪ್ಪ ಸುಂಕದ, ಪರಕಿ ಶರಣಪ್ಪ, ಮರಿಯಪ್ಪ ಸಾಲೋಣಿ ಉಪಸ್ಥಿತರಿದ್ದರು.

ಸಿದ್ದಾಪುರ ಕಸ್ತೂರಬಾ ಶಾಲೆ ವಿದ್ಯಾರ್ಥಿನಿಯರು ಪ್ರಾರ್ಥಿಸಿದರು. ಮೆಹಬೂಬ ಕಿಲ್ಲೇದಾರ ನಾಡಗೀತೆ, ರೈತ ಗೀತೆ ಹಾಡಿದರು. ಶಿಕ್ಷಕಿ ಅಂಭ್ರಮ್ಮ ಕಾರ್ಯಕ್ರಮ ನಿರ್ವಹಿಸಿದರು.

ಸಿಎಂಜತೆಚರ್ಚೆ 'ರಾಜ್ಯೋತ್ಸವಪ್ರಶಸ್ತಿಗಳನ್ನು ಅರ್ಜಿ ಕರೆಯದೇ ಪ್ರಾಮಾಣಿಕರನ್ನು ಗುರುತಿಸಿ ಪ್ರಶಸ್ತಿ ನೀಡಬೇಕು ಎಂಬ ಬೇಡಿಕೆಯ ಬಗ್ಗೆ ಸಿಎಂ ಬಳಿ ಚರ್ಚಿಸಿರುವೆ. ಶೀಘ್ರವೇ ನಿರ್ಧಾರ ಪ್ರಕಟವಾಗಲಿದೆ. ಈ ಬಾರಿ ಪತ್ರಿಕೆಗಳ ವಿತರಕರಿಗೆ ಪ್ರಶಸ್ತಿ ನೀಡುವ ಉದ್ದೇಶವನ್ನು ಹೊಂದಲಾಗಿದೆ. ಸಮಾಜದ ತುಳಿತಕ್ಕೊಳಗಾದ ಅಸಹಾಯಕರಾಗಿರುವ ಸೌಲಭ್ಯಗಳಿಂದ ವಂಚಿತರಾದವರಿಗೆ ಧ್ವನಿಯಾಗಿ ಪತ್ರಕರ್ತರು ಕೆಲಸ ಮಾಡಬೇಕು. ಪತ್ರಕರ್ತರಿಗೆ ನಿವೇಶನ ನೀಡುವ ಬಗ್ಗೆ ಶೀಘ್ರ ನಿರ್ಧಾರ ಕೈಗೊಳ್ಳಲಾಗುವುದು. ಶಾಶ್ವತವಾದ ಪತ್ರಿಕಾ ಭವನದ ನಿರ್ಮಾಣಕ್ಕೆ ಸರ್ಕಾರದ ಹಾಗೂ ವೈಯಕ್ತಿಕ ನೆರವನ್ನು ನಿಮ್ಮ ಬೇಡಿಕೆಯಂತೆ ನೀಡಲು ಸದಾ ಸಿದ್ಧ' ಎಂದು ತಂಗಡಗಿ ಭರವಸೆ ನೀಡಿದರು.

# ಮೋದಿ @ 75: ಜಾರಿಗೊಳಿಸುವ ಕಲೆ

## ಹಸ್ಮುಖ್ ಅಧಿಯಾ



ನಾನು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಅಧೀನದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಮಟ್ಟದಲ್ಲಿ ಸುಮಾರು 2 ದಶಕಗಳ ಕಾಲ ನಾಗರಿಕ ಸೇವಕನಾಗಿ ಕಾರ್ಯನಿರ್ವಹಿಸಿದ್ದೇನೆ. ಆದರೆ ಅವರೊಂದಿಗೆ ನನಗೆ ಅತಿ ಸಮೀಪದ ಕೆಲಸದ ಅನುಭವ ಬಂದಿದ್ದು, ಗುಜರಾತ್ನಲ್ಲಿ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿಯಾಗಿ ಅವರ ಕಚೇರಿಯಲ್ಲಿ 2 ವರ್ಷಗಳ ಕಾಲ –2004 ರಿಂದ 2006 ರವರೆಗೆ ನೇರವಾಗಿ ಅವರ ಜತೆ ಕೆಲಸ ಮಾಡಿದಾಗ. ಅವರ ಅಗಾಧ ದೂರದೃಷ್ಟಿಯ ಸಾಮರ್ಥ್ಯ ಮತ್ತು ಭವಿಷ್ಯವನ್ನು ನೋಡುವ ಸಾಮರ್ಥ್ಯದ ಬಗ್ಗೆ ಎಲ್ಲರಿಗೂ ತಿಳಿದೇ ಇದೆ, ಆದರೆ ಅವರ ಜಾರಿ ಅಥವಾ ಕೆಲಸಗಳನ್ನು ಅನುಷ್ಠಾನಗೊಳಿಸುವ ಕಲೆ ಮತ್ತು ಮಂತ್ರಿಗಳು ಮತ್ತು ಅಧಿಕಾರಿಗಳ ದೊಡ್ಡ ತಂಡದಿಂದ ಕೆಲಸ ಮಾಡಿಸುವ ಅವರ ಸಾಮರ್ಥ್ಯ ಮಾತ್ರ ಹೆಚ್ಚಿನ ಜನಕ್ಕೆ ತಿಳಿದಿಲ್ಲ. ಓರ್ವ ಮ್ಯಾನೇಜ್ ಮೆಂಟ್ ವಿದ್ಯಾರ್ಥಿಯಾಗಿ, ನಾನು ಅದನ್ನು ಸೂಕ್ಷ್ಮವಾಗಿ ಗಮನಿಸಿದ್ದೇನೆ. ನಿರ್ವಹಣೆಯ ಔಪಚಾರಿಕ ಅಧ್ಯಯನವಿಲ್ಲದೆ ಅವರು ತಮ್ಮ ನಾಯಕತ್ವದಲ್ಲಿ ನಿರ್ವಹಣೆಯ ಕೆಲವು ಅತ್ಯುತ್ತಮ ತತ್ವಗಳನ್ನು ಅಂತರ್ಗತವಾಗಿ ಬೆಳೆಸಿಕೊಂಡಿರುವುದನ್ನು ನಾನು ಕಣ್ಣಾರೆ ಕಂಡಿದ್ದೇನೆ.

ಇನ್ನೊಂದು ಅತ್ಯಂತ ಮುಖ್ಯ ಅಂಶವೆಂದರೆ, ಸೂಕ್ತ ಕೆಲಸಕ್ಕೆ ಸೂಕ್ತ ವ್ಯಕ್ತಿಯನ್ನು ಗುರುತಿಸುವ ಅವರ ಸಾಮರ್ಥ್ಯ. ಒಬ್ಬ ವ್ಯಕ್ತಿಯಲ್ಲಿನ ಶಕ್ತಿ ಅಥವಾ ಅಂತಸತ್ವ (ಸ್ಪಾರ್ಕ್) ಅನ್ನು ಗುರುತಿಸುವ ಸ್ವಾಭಾವಿಕ ಸಾಮರ್ಥ್ಯ ಅವರಲ್ಲಿದೆ ಮತ್ತು ಅವರು ಅಂತಹ ವ್ಯಕ್ತಿಯನ್ನು ಉನ್ನತ ಮಟ್ಟದ ಪಾತ್ರಗಳಿಗೆ ಆಯ್ಕೆ ಮಾಡುತ್ತಾರೆ. ಈ ಅಭ್ಯಾಸದಲ್ಲಿ ಅವರು ಅಪರೂಪವಕ್ಕೆ ತಪ್ಪು ಮಾಡಿದ್ದಾರೆನಿಸುತ್ತದೆ. ನಿರ್ದಿಷ್ಟ ಕೆಲಸಕ್ಕೆ ಸೂಕ್ತ ವ್ಯಕ್ತಿಯನ್ನು ಆಯ್ಕೆ ಮಾಡಿದ ನಂತರ, ಅವರು ಪ್ರತಿಯೊಬ್ಬರಿಗೂ ಸ್ಥಿರ ಅಧಿಕಾರಾವಧಿಯನ್ನು ನೀಡುತ್ತಾರೆ, ಇದು ಆಡಳಿತದಲ್ಲಿ ಅತ್ಯಂತ ಅವಶ್ಯಕವಾಗಿರುತ್ತದೆ. ಆನಂತರ ಆ ಕೆಲಸದ ಪ್ರತಿಯೊಂದು ಸೂಕ್ಷ್ಮ ಅಂಶಗಳನ್ನು ಅವಲೋಕಿಸುತ್ತಾರೆ ಮತ್ತು ಪ್ರತಿ ಅಂಶದ ಒಳ–ಹೊರಗನ್ನು ಅರಿತುಕೊಳ್ಳುವ ಅಭ್ಯಾಸ ರೂಢಿಸಿಕೊಂಡಿದ್ದಾರೆ. ಯಾವುದೇ ಸಭೆಯಲ್ಲಿ ಅವರ ಮುಂದೆ ಪ್ರಸ್ತುತಪಡಿಸಲಾದ ಎಲ್ಲಾ ಪ್ರಾತ್ಯಕ್ಷಿಕೆಗಳನ್ನು ಅವರು ಬಹಳ ತಾಳ್ಮೆಯಿಂದ ಆಲಿಸುತ್ತಾರೆ. ಅವರು ತಮ್ಮ ಮುಂದಿರುವ ವಿಷಯದ ಬಗ್ಗೆ ಅರ್ಥಮಾಡಿಕೊಳ್ಳಲು ಸೂಕ್ತ ಪ್ರಶ್ನೆಗಳನ್ನು ಕೇಳುತ್ತಾರೆ. ಆನಂತರ ಅವರು ಕೆಲವು ಅಸಾಮಾನ್ಯ ಚೌಕಟ್ಟಿನಿಂದಾಚೆಗೆ ಯೋಚಿಸುವ ಪರ್ಯಾಯ ದೃಷ್ಟಿಕೋನಗಳನ್ನು ಹಂಚಿಕೊಳ್ಳುತ್ತಾರೆ, ಅದು ಭಾಗವಹಿಸುವವರನ್ನು ಆಶ್ಚರ್ಯಚಕಿತಗೊಳಿಸುತ್ತದೆ, ಈ ಅಂಶಗಳು ಅವರಿಗಿಂತ ಮೊದಲು ನನಗೆ ಏಕೆ ಹೊಳೆಯಲಿಲ್ಲವೆಂದು ಅವರೆಲ್ಲರೂ ಆಶ್ಚರ್ಯ ಪಡುತ್ತಾರೆ. ನಾವು ಎಂದಿಗೂ ಯೋಚಿಸದ ಕೆಲವು ಭವಿಷ್ಯದ ವಿಚಾರಗಳೊಂದಿಗೆ ಅವರು ಉನ್ನತ ದರ್ಜೆಯ ಸಲಹೆಗಾರರನ್ನು ಆಶ್ಚರ್ಯಗೊಳಿಸಿದ್ದನ್ನೂ ಸಹ ನಾನು ನೋಡಿದ್ದೇನೆ.

ನರೇಂದ್ರ ಮೋದಿ ಅವರು ಕ್ರೀಡಾ ಸಚಿವಾಲಯ, ಆಯುಷ್ ಅಥವಾ ಸಾಮಾಜಿಕ ನ್ಯಾಯ ಸಚಿವಾಲಯವಾಗಲಿ, ಭಾರತ ಸರ್ಕಾರದ ಪ್ರತಿಯೊಂದು ಸಚಿವಾಲಯಗಳ ಪ್ರಗತಿ ಪರಿಶೀಲನಾ ಸಭೆಗಳನ್ನು ನಡೆಸುತ್ತಲೇ ಇರುವುದನ್ನು ನಾನು ಗಮನಿಸಿದ್ದೇನೆ. ಈ ಪರಿಶೀಲನಾ ಸಭೆಗಳು ಇಲಾಖೆಗಳನ್ನು ಸದಾ ಸನ್ನದ್ಧ ಸ್ಥಿತಿಯಲ್ಲಿಡುತ್ತವೆ. 2014–2018 ರವರೆಗಿನ ನನ್ನ ನಾಲ್ಕು ವರ್ಷಗಳ ಹಣಕಾಸು ಸಚಿವಾಲಯದ ಅವಧಿಯಲ್ಲಿ ಅವರು ಆ ನಾಲ್ಕು ವರ್ಷಗಳಲ್ಲಿ ಪ್ರತಿಯೊಂದು ಸಚಿವಾಲಯದ ಕೆಲಸವನ್ನು ಒಂದಕ್ಕಿಂತ ಹೆಚ್ಚು ಬಾರಿ ಪರಿಶೀಲಿಸಿರುವುದನ್ನು ನಾನೇ ಖುದ್ದು ನೋಡಿದ್ದೇನೆ.

ಮೋದಿ ಜಿ ಒಬ್ಬ ಮಹಾನ್ ವಾಗ್ಮಿ ಎಂಬುದು ಎಲ್ಲರಿಗೂ ತಿಳಿದೇ ಇದೆ. ಆದರೆ ಸಂಕೀರ್ಣವಾದ ವಿಚಾರವನ್ನು ಅಧಿಕಾರಿಗಳು ಅಥವಾ ಮಂತ್ರಿಗಳ ಗುಂಪಿಗೆ ತಿಳಿಸುವ ಅವರ ಸಾಮರ್ಥ್ಯವು ಅತ್ಯಂತ ಶ್ರೇಷ್ಠವಾಗಿದೆ ಎಂದು ತುಂಬಾ ಜನರಿಗೆ ತಿಳಿದಿಲ್ಲ. ಅವರು ತಮ್ಮ ವಿಷಯವನ್ನು ತಿಳಿಸಲು ಸರಳ ಪದ ಮತ್ತು ಉದಾಹರಣೆಗಳನ್ನು ಹೆಚ್ಚು ಬಳಸುತ್ತಾರೆ.

ಮೋದಿ ಜಿ ಅವರನ್ನು ವೈಯಕ್ತಿಕವಾಗಿ ಭೇಟಿಯಾಗುವ ಪ್ರತಿಯೊಬ್ಬರೂ ಸಹ ಸದಾ ಅವರ ಗ್ರಹಿಕಾ ಅಥವಾ ಆಲಿಸುವ ಸಾಮರ್ಥ್ಯದಿಂದ ಪ್ರಭಾವಿತರಾಗುತ್ತಾರೆ. ನೀವು ಹತ್ತು ನಿಮಿಷ ಅಥವಾ ಒಂದು ಗಂಟೆಯಾದರೂ ಅವರನ್ನು ಭೇಟಿಯಾದ–ರೆ, ಅವರು ನೇರ ನಿಮ್ಮ ಕಣ್ಣುಗಳನ್ನು ನೋಡುತ್ತಾರೆ ಮತ್ತು ಮಾತನಾಡುತ್ತಾರೆ, ಅವರು ತಾನು ಕೆಲಸದ ಒತ್ತಡದಲ್ಲಿದ್ದೇನೆ ಎಂಬ ಭಾವನೆ ಬರುವ ರೀತಿ ಎಂದಿಗೂ ತಮ್ಮ ದೃಷ್ಟಿಯನ್ನು ಅತ್ತಿತ್ತ ಹಾಯಿಸುವುದಿಲ್ಲ. ಅಷ್ಟು ದೊಡ್ಡ ಹುದ್ದೆಯಲ್ಲಿರುವ ಸದಾ ಕೆಲಸದ ಒತ್ತಡದಲ್ಲಿರುವ ವ್ಯಕ್ತಿಗೆ ಇದು ಅತ್ಯಂತ ಗಮನಾರ್ಹ ಗುಣ. ಅವರ ಕಚೇರಿಯಲ್ಲಿ ಅವರ ಮೇಜಿನ ಮೇಲೆ ಒಂದು ತುಣುಕು ಕಾಗದವೂ ಇರುವುದಿಲ್ಲ. ಕೈಹಿಡಿದಿರುವ ಕೆಲಸದ ಮೇಲೆ ಗಮನಹರಿಸುವ ಮತ್ತು ವರ್ತಮಾನದಲ್ಲಿ ಬದುಕುವ ಅವರ ಸಾಮರ್ಥ್ಯವು ಗಮನಾರ್ಹವಾಗಿದೆ.

ಪ್ರಧಾನಮಂತ್ರಿ ಅವರನ್ನು ಭೇಟಿಯಾಗುವ ಪ್ರತಿಯೊಬ್ಬರೂ ಆತನ ಅಥವಾ ಆಕೆಯ ಹೆಸರು ಮತ್ತು ಹಿಂದಿನ ಸಂವಹನಗಳನ್ನು ನೆನಪಿಸಿಕೊಳ್ಳುವ ತೀಕ್ಷ್ಣವಾದ ಅವರ ಸ್ಮರಣಾಶಕ್ತಿಯಿಂದ ದಿಗ್ಭ್ರಮೆಗೊಳ್ಳುತ್ತಾರೆ. ಯಾವುದೇ ವ್ಯಕ್ತಿಯನ್ನು ಆತನ ಹೆಸರಿನಿಂದ ಕರೆಯುವ ಈ ಕಲೆ ತಕ್ಷಣವೇ ಒಬ್ಬ ವ್ಯಕ್ತಿಯನ್ನು ಪ್ರೀತಿಸುವಂತೆ ಮಾಡುತ್ತದೆ. ಒಮ್ಮೆ ನಾನು ಅವರನ್ನು ಕೇಳಿದ್ದೆ, 'ನೀವು ಇಷ್ಟು ಹೆಸರುಗಳನ್ನು ಹೇಗೆ ನೆನಪಿಸಿಕೊಳ್ಳುತ್ತೀರೆಂದು"?, ಆಗ ಅವರು ಹಾಗೆಯೇ ಹೆಸರುಗಳನ್ನು ನೆನಪಿಟ್ಟುಕೊಳ್ಳಲು ಪ್ರಯತ್ನಿಸಿದರೆ ನನಗೆ 50 ಹೆಸರುಗಳನ್ನು ನೆನಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ ಎಂದು ನನಗೆ ಸ್ಪಷ್ಟವಾಗಿ ಹೇಳಿದರು. ಆದರೆ ಅವರು ಕೆಲವು ಮುಖಗಳನ್ನು ನೋಡಿದ ಕೂಡಲೇ ಅವರ ಹೆಸರು ಅವರ ಮನಸ್ಸಿನಲ್ಲಿ ಒಂದು ಮಿಂಚಿನಂತೆ ಹಾದು ಹೋಗುತ್ತದೆ. ಇದು ನನಗೆ ಆ ದೇವರು ನೀಡಿದ ಕೊಡುಗೆ ಎಂಬುದನ್ನು ಅವರೇ ಒಪ್ಪಿಕೊಂಡಿದ್ದರು.

ನಾನು ಅನೇಕ ಸಭೆಗಳಲ್ಲಿ ಅವರೊಂದಿಗೆ ಅನೇಕ ಸಂವಹನಗಳಲ್ಲಿ ಭಾಗಿಯಾಗಿದ್ದೇನೆ, ಅವರು ಎಂದಿಗೂ ತಮ್ಮ ಧ್ವನಿ ಏರಿಸಿ ಮಾತನಾಡಿದ್ದನ್ನು ಅಥವಾ ಓರ್ವ ವ್ಯಕ್ತಿಯನ್ನು ಬೈಯುವುದನ್ನು ನಾನು ನೋಡಿಲ್ಲ. ಕೆಲಸ ಕಾರ್ಯಗಳಲ್ಲಿ ನಿರೀಕ್ಷಿತ ಪ್ರಗತಿಯಾಗದಿದ್ದಾಗ, ಅವರು ಕೆಲವೊಮ್ಮೆ ಕೇವಲ ಒಬ್ಬ ವ್ಯಕ್ತಿಯ ಹೆಸರನ್ನು ಮಾತ್ರ ಹೆಸರಿಸದೆ ಒಟ್ಟಾರೆ ಜನರ ಗುಂಪಿನ ಬಗ್ಗೆ ತಮ್ಮ ನಿರಾಶೆಯನ್ನು ಹೊರಹಾಕುತ್ತಾರೆ.

ಮೋದಿ ಜಿ ಸದಾ ಹಲವು ಜನರಿಗೆ ಸುಲಭವಾಗಿ ಕೈಗೆ ಸಿಗುತ್ತಾರೆ. ಇದು ಅವರಿಗೆ ಹಲವು ಆಯಾಮಗಳನ್ನು ಪಡೆಯಲು ಸುಲಭವಾಗಿಸುತ್ತದೆ. ಅವರು ತಮ್ಮ ಸುತ್ತಲಿನ ಜನರ ಒಂದು ಸಣ್ಣ ಗುಂಪಿಗೆ ಮಾತ್ರ ಸೀಮಿತವಾಗಿರುವುದಿಲ್ಲ. ಆದ್ದರಿಂದ ಯಾರೊಬ್ಬರೂ ಅವರನ್ನು ಸುಲಭವಾಗಿ ದಾರಿ ತಪ್ಪಿಸಲಾಗದು.

ಪ್ರಧಾನ ಕಾರ್ಯದರ್ಶಿಯಾಗಿ ಅವರ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಅವರು ನನಗೆ ಏನೇನು ಕೆಲಸಗಳಾಗಬೇಕಿದೆ ಎಂಬ ದೀರ್ಘ ಪಟ್ಟಿಯನ್ನು ನೀಡುತ್ತಿದ್ದರು. ಅದರೊಟ್ಟಿಗೆ ಅರ್ಧ ಗಂಟೆಯ ಒಂದು ಸಭೆಯಲ್ಲಿ, ನಮ್ಮ ದಿನಚರಿಯಲ್ಲಿ 'ಮಾಡಬೇಕಾದ'(ಟು ಡು ) ಪಟ್ಟಿಯ ಎರಡು ಪುಟಗಳು ತುಂಬಿರುತ್ತಿದ್ದವು. ಅವರ ಸೂಚನೆಗಳನ್ನು ಬರೆದುಕೊಳ್ಳುವಾಗ ನಾವು ಕೆಲವೊಮ್ಮೆ ಅವರಿಗೆ ಮತ್ತೆ ವರದಿ ಸಲ್ಲಿಸುವುದನ್ನು ಮರೆಯುತ್ತಿದ್ದೆವು. ಆದರೆ ಅವರು ಎಂದಿಗೂ ಮರೆಯುತ್ತಿರಲಿಲ್ಲ, ಅವರು ಮತ್ತೆ ಮತ್ತೆ ನೆನಪಿಸುತ್ತಲೇ ಇರುತ್ತಾರೆ. ಅವರ ಮೂರನೇ ಬಾರಿ ನೆನಪು (ರಿಮೈಂಡರ್ )ಮಾಡುತ್ತಿದ್ದುದೂ ಸಹ ಎಷ್ಟು ವಿನಮ್ರವಾಗಿರುತ್ತದೆ ಎಂದ–ರೆ, "ಹಸ್ಮುಖ್ಭಾಯ್, ಆ ಕೆಲಸದ ಮೇಲೆ ಏನಾದರೂ ಮಾಡಲಾಗಿದೆಯೇ?" ಎಂದು ಕೇಳುತ್ತಿದ್ದರು. ಅಂತಹ ಸೌಮ್ಯ ಸ್ವಭಾವದಿಂದಾಗಿ ನಾವು ತ್ವರಿತವಾಗಿ ಕಾರ್ಯರೂಪಕ್ಕಿಳಿಯುತ್ತಿದ್ದೆವು. ಕೋಪಗೊಳ್ಳದೆ ಅಥವಾ ಅಸಹನೆಯಿಂದ ವರ್ತಿಸದೆ ಇರುವುದು ಅವರ ಹಿಡಿದ ಕೆಲಸಗಳನ್ನು ಚಾಚೂತಪ್ಪದೆ ಜಾರಿಗೊಳಿಸುವ ಕಲೆಯನ್ನು ಅಭಿವ್ಯಕ್ತಗೊಳಿಸುತ್ತದೆ.

**ಲೇಖಕರು, ಐ.ಎ.ಎಸ್ ಅಧಿಕಾರಿ, ಭಾರತದ ಹಣಕಾಸು ಮತ್ತು ಕಂದಾಯ ಕಾರ್ಯದರ್ಶಿಯಾಗಿ ನಿವೃತ್ತರಾಗಿದ್ದಾರೆ.**

# ಕೆಲ ಜಾತಿಗಳ ಹಿಂದೆ ಕ್ರಿಶ್ಚಿಯನ್ ಎಂದು ನಮೂದು: ಸೋನಿಯಾ ಓಲೈಕೆಗೆ ಕಸರತ್ತು;ರೆಡ್ಡಿ



**ಕೊಪ್ಪಳ** : ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ನಡೆಯಲಿರುವ ಎಲ್ಲ ಜಾತಿಗಳ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆ ಪಟ್ಟಿಯಲ್ಲಿ ಹಿಂದೂಗಳ ಜಾತಿಯ ಹಿಂದೆ ಕ್ರಿಶ್ಚಿಯನ್ ಎಂದು ಸೇರಿಸುವ ಮೂಲಕ ಕಾಂಗ್ರೆಸ್ ಸೋನಿಯಾ ಗಾಂಧಿ ಅವರನ್ನು ಮೆಚ್ಚಿಸಲು ಕಸರತ್ತು ಮಾಡುತ್ತಿದೆ ಎಂದು ಬಿಜೆಪಿ ಶಾಸಕ ಜನಾರ್ದನ ರೆಡ್ಡಿ ಆರೋಪಿಸಿದರು.

ನಗರದಲ್ಲಿ ಬುಧವಾರ ಸುದ್ದಿಗಾರರ ಜೊತೆ ಮಾತನಾಡಿ 'ಲಿಂಗಾಯತ, ರೆಡ್ಡಿ, ಬ್ರಾಹ್ಮಣ ಹೆಸರಿನ ಮುಂದೆ ಕ್ರಿಶ್ಚಿಯನ್ ಎಂದು ಪಟ್ಟಿಯಲ್ಲಿ ನಮೂದಿಸಲಾಗಿದೆ. ಹಿಂದೂ ಸಮಾಜದಲ್ಲಿರುವ ಎಲ್ಲ ಜಾತಿಗಳ ಜೊತೆ ಕ್ರಿಶ್ಚಿಯನ್ ಪದ ಸೇರಿಸಿ ಮತಾಂತರ ಆಗುವವರಿಗೆ ಪ್ರೇರೇಪಣೆ ನೀಡುವಂತಿದೆ. ಎಲ್ಲ ಜಾತಿಗಳು ಕ್ರಿಶ್ಚಿಯನ್‌ನಲ್ಲಿದ್ದರೆ ಲಾಭ ಆಗಬಹುದು ಎಂದು ರಾಜ್ಯ ಸರ್ಕಾರ ಲೆಕ್ಕಾಚಾರ ಹೊಂದಿದೆ' ಎಂದರು.

ಹಿಂದೂ ಸಮಾಜವನ್ನು ನಾಶ ಮಾಡಲು ಪ್ರಯತ್ನದಲ್ಲಿರುವ ಕಾಂಗ್ರೆಸ್ ಇದೇ ವಿಷಯದಲ್ಲಿ ತಾನೇ ನಾಶವಾಗಿ ಹೋಗುತ್ತದೆ. ಹಿಂದೆಯೂ ಹಿಂದೂ ಸಮಾಜವನ್ನು ಒಡೆಯಲು ಸಾಕಷ್ಟು ಜನ ಪ್ರಯತ್ನ ಮಾಡಿದರೂ ದೊಡ್ಡಪ್ರಮಾಣದಲ್ಲಿ ಯಶಸ್ಸು ಕಂಡಿಲ್ಲ. ಹಿಂದೂಗಳು ಎಲ್ಲಿಯೇ ಹೋದರೂ ಮನೆ ಇಲ್ಲದಿದ್ದರೂ ದೇವಸ್ಥಾನ ಚೆನ್ನಾಗಿರಬೇಕು ಎಂದು ಬಯಸುತ್ತಾರೆ' ಎಂದು ಹೇಳಿದರು.

ಗಂಗಾವತಿಯಲ್ಲಿ ನಡೆದ ಅಕ್ರಮ ಅಕ್ಕಿ ಸಾಗಾಣಿಕೆ ಯತ್ನ ಪ್ರಕರಣದ ಬಗ್ಗೆ ಪ್ರತಿಕ್ರಿಯಿಸಿ 'ಸರ್ಕಾರದ ಅಕ್ಕಿಯನ್ನು ದಲ್ಲಾಳಿಗಳು ಕಡಿಮೆ ಬೆಲೆಗೆ ಖರೀದಿಸಿ ಪಾಲಿಷ್ ಮಾಡಿ ಒಳ್ಳೆಯ ಅಕ್ಕಿ ಜೊತೆ ಮಿಶ್ರಣ ಮಾಡಿ ವಿದೇಶಕ್ಕೆ ಮಾರಾಟ ಮಾಡುವ ದೊಡ್ಡಜಾಲವೇ ಇದೆ. ಇದೆಲ್ಲವೂ ಗೊತ್ತಿದ್ದರೂ ಸರ್ಕಾರ ಸುಮ್ಮನಿದೆ' ಎಂದು ಟೀಕಿಸಿದರು.

# ಸಂತೋಷ್ ಭಜಂತ್ರಿ ಗೆ ಪದವಿಪೂರ್ವ ಕಾಲೇಜ್ ಕ್ರೀಡಾಕೂಟದಲ್ಲಿ ಪ್ರಥಮ ಸ್ಥಾನ



**ಕೊಪ್ಪಳ:** ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಕೊಪ್ಪಳ ಜಿಲ್ಲಾ ಮಟ್ಟದ ಪದವಿ ಪೂರ್ವ ಕಾಲೇಜುಗಳ ಕ್ರೀಡಾಕೂಟ 2025 26ನೇ ಸಾಲಿನ ಕರಾಟೆ ಸ್ಪರ್ಧೆಯಲ್ಲಿ ಭಾಗವಹಿಸಿದ ಸಂತೋಷ್ ಭಜಂತ್ರಿ ಪ್ರಥಮ ಸ್ಥಾನ ದೊರಕಿದೆ.

ಎಚ್‌ಆರ್ ಸರೋಜಮ್ಮ ಬಾಲಕಿಯರ ಪದವಿಪೂರ್ವ ಕಾಲೇಜ್ ಹಾಗೂ ಶಾಲಾ ಶಿಕ್ಷಣ ಇಲಾಖೆ ಪದವಿ ಪೂರ್ವ ಕೊಪ್ಪಳ ಶ್ರೀ ಕೊಟ್ರೇಶ್ವರ ವಿದ್ಯಾ ವಾರ್ದಿಕ ಸಂಘ ರಿಜಿಸ್ಟರ್ ಗಂಗಾವತಿ ಇವರ ಸಂಯುಕ್ತ ಆಶ್ರಯದಲ್ಲಿ ನಡೆದ ಕೊಪ್ಪಳ ಜಿಲ್ಲಾ ಮಟ್ಟದ ಪದವಿ ಪೂರ್ವ ಕಾಲೇಜುಗಳ ಕರಾಟೆ ಕ್ರೀಡೆಯಲ್ಲಿ ಸಂತೋಷ್

ಭಜಂತ್ರಿ ಪ್ರಥಮ ಸ್ಥಾನ ಪಡೆದುಕೊಂಡಿದ್ದಾನೆ. ಪ್ರಥಮ ಸ್ಥಾನ ಪಡೆದ ಸಂತೋಷ ಭಜಂತ್ರಿ ಸಾಯಿ ಬುಡಕನ್ ಕರಾಟೆ ಸಂಸ್ಥೆ ಮುಖ್ಯಸ್ಥ ಶ್ರೀಕಾಂತ ಕಲಾಲ್. ರಾಘವೇಂದ್ರ ಅರಕೇರಿ, ಮೌಲಾ, ತಿರುಮಲೇಶ್ ಯಾದವ್, ಹಾಗೂ ಐಶ್ವರ್ಯ ಕಾಟಿಕ್ ಅಭಿನಂದಿಸಿ ಗೌರವಿಸಿದರು.

# ವಿಕೃತ ಡಿಜೆ ಸಂಸ್ಕೃತಿ ಅಳಿಸಿ



**ಕುಂದಗೋಳ** : ವಿಕೃತ ಸಂಗೀತದ ಡಿಜೆ ಸಂಸ್ಕೃತಿಯನ್ನು ಅಳಿಸಿ, ಯುವಜನತೆ ಪರಿಶುದ್ಧ-ಸುಸ್ರಾವ್ಯ-ಸುಮಧುರ ಸಂಗೀತದತ್ತ ಗಮನ ನೀಡಬೇಕು ಎಂದು ಕೊಲ್ಲಾಪುರ ಕನೇರಿ ಮಠದ ಸಿದ್ಧಗಿರಿ ಶ್ರೀ ಅದೃಶ್ಯ ಕಾಡಸಿದ್ದೇಶ್ವರ ಮಹಾಸ್ವಾಮಿಜಿಯವರು ಜನತೆಗೆ ಕರೆ ನೀಡಿದರು.

ಕುಂದಗೋಳ ಸವಾಯಿ ಗಂಧರ್ವ ಸ್ಮಾರಕ ಸಭಾಭವನದಲ್ಲಿ ವಿಸ್ವಸ್ಥ ಸಂಸ್ಥೆ ಹಾಗೂ ರಾಜ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಸವಾಯಿ ಗಂಧರ್ವರ 73ನೇ ಪುಣ್ಯತಿಥಿ ಅಂಗವಾಗಿ ಹಮ್ಮಿಕೊಂಡಿದ್ದ ಅಹೋರಾತ್ರಿ ಸಂಗೀತ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಡಿಜೆ ಶಬ್ದವು ನಮ್ಮ ದೇಹಕ್ಕೆ ಅನೇಕ ಅಪಾಯಗಳನ್ನುಂಟು ಮಾಡುತ್ತಿದ್ದು ಅವುಗಳನ್ನು ಬಳಸಬಾರದು ಮತ್ತು ಅವುಗಳಿಗೆ ಪ್ರೋತ್ಸಾಹಿಸಬಾರದು ಎಂದು ಕರೆ ನೀಡಿದ ಶ್ರೀಗಳು ಮಾತನಾಡಿ ನಮ್ಮ ಸಾಂಪ್ರದಾಯ ಸಂಗೀತಕ್ಕೆ ದೇವಲೋಕದ ನಾರದರು ಕರ್ತೃ ಆಗಿದ್ದು ನಮ್ಮಲ್ಲಿ ಪ್ರತಿಯೊಂದು ಕಾರ್ಯದಲ್ಲೂ ಸಂಗೀತವು ಹಾಸುಹೊಕ್ಕಾಗಿದ್ದು, ಸಂಗೀತದಿಂದ ರೋಗವಾಸಿಯಾಗಬಹುದು, ಮಳೆ ತರಿಸಬಹುದು ದೀಪ ಹಚ್ಚಬಹುದು ಎಂಬುದು ಗತಕಾಲದ ಪ್ರಕರಣಗಳಿಂದ ನಿರ್ಧರಿಸಿಗಳಿಂದ ತಿಳಿದು ಬರುತ್ತದೆ. ಇಂತಹ ಶಕ್ತಿಯನ್ನು ಅಡಗಿಸಿಕೊಂಡ ಸಂಗೀತೋತ್ಸವದಲ್ಲಿ ಇಂದು ನಾವು ಪಾಲ್ಗೊಳ್ಳುತ್ತಿರುವುದು ಹೆಮ್ಮೆ ಎನಿಸುತ್ತಿದೆ ಎಂದರು.

ಸಾನಿಧ್ಯ ವಹಿಸಿದ್ದ ಶಿರಹಟ್ಟಿಯ ಶ್ರೀ ಪಕೀರ ಸಿದ್ದರಾಮ ಮಹಾಸ್ವಾಮಿಗಳು ಮಾತನಾಡಿ ಎಲ್ಲರಿಗೂ ಸಂಗೀತವು ದಿವ್ಯಔಷಧವಾಗಿದ್ದು ನಾವೆಲ್ಲ ಅದನ್ನು ಆರಾಧಿಸೋಣ ಎಂದರು ಶಾಸಕ ಎಂಆರ್ ಪಾಟೀಲ್ ಅವರು ಮಾತನಾಡಿ ಕುಂದಗೋಳ ಎಂದರೆ ಸಂಗೀತದ ನಾಡು, ಎಂದು ಹೇಳಿದರು.

ವಿಶ್ವಸ್ಥ ಸಂಸ್ಥೆಯ ಅಧ್ಯಕ್ಷ ಡಾ. ಅರವಿಂದ್ ಕಟಗಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ಪ್ರತಿ ವರ್ಷವೂ ನಾವು ಈ ಸಂಗೀತ ಕಾರ್ಯಕ್ರಮವನ್ನು ಆಯೋಜಿಸಲು ಪ್ರತಿ ಬಾರಿ ಹಣದ ಕೊರತೆ ಆಗುತ್ತಿದೆ. ಆದರೂ ಗುರುವರ್ಯ ಸವಾಯಿ ಗಂಧರ್ವರ ಆಶೀರ್ವಾದದಿಂದ ಎಲ್ಲವೂ ಸರಳವಾಗಿ ಸಾಗುತ್ತಿದೆ.

ಕಲಾವಿದರು ಇಲ್ಲಿ ಸೇವೆ ಸಲ್ಲಿಸಲು ನಾ ಮುಂದು ತಾ ಮುಂದು ಎಂದು ಬಂದು ತಮ್ಮ ನಿಸ್ವಾರ್ಥ ಸೇವೆ ಸಲ್ಲಿಸುತ್ತಾರೆ ಅವರ ಭಾವ ರಮಣೀಯ ಎಂದರು. ಸವಾಯಿ ಗಂಧರ್ವ ರಾಷ್ಟ್ರೀಯ ಪುರಸ್ಕೃತರಾದ ಅಶ್ವಿನಿ ಬಿಳಿ ದೇಶಪಾಂಡೆ ಅವರನ್ನು ಗೌರವಿಸಿ ಸತ್ಕರಿಸಲಾಯಿತು. ಅದರಂತೆ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಎಲ್ಲ ಕಲಾವಿದರನ್ನು ಮತ್ತು ಕಾರ್ಯಕ್ರಮಕ್ಕೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸೇವೆ ಸಲ್ಲಿಸಿದವರನ್ನು ಸನ್ಮಾನಿಸಿ-ಗೌರವಿಸಲಾಯಿತು

ಧಾರವಾಡ ಶೆಟ್ಟರ್ ಸ್ವಾಗತಿಸಿದರು. ಶಂಕರ್ ಗೌಡ ದೊಡ್ಡಮನಿ ವಂದಿಸಿದರು ಪ್ರೊಫೆಸರ್ ಎನ್.ಎಸ್ ಕುಸುಗಲ್ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಮೋಹನ್ ಜೋಶಿ ಅವರ ತಬಲಾ ಸೋಲೊ ತನುಮನತಣಿಸಿತು.

# ಬಹೂಪಯೋಗಿ ಬಿದಿರಿನಿಂದ ಆರ್ಥಿಕ ಸದೃಢತೆ



**ಕಲಬುರಗಿ:** ಬಿದಿರು ಅರಣ್ಯ ಬೆಳೆಯಾಗಿದ್ದು, ಬುಟ್ಟಿ, ಪೀಠೋಪಕರಣಗಳ ತಯಾರಿಕೆ, ಕೃಷಿ ಉಪಕರಣಗಳ ತಯಾರಿಕೆ, ಮನೆ ನಿರ್ಮಾಣಕ್ಕೆ ಸಲಕರಣೆ, ಜೊತೆಗೆ ಭವಿಷ್ಯದಲ್ಲಿ ಇದನ್ನು ಆಹಾರ, ಟಿಂಬರ್, ಇಂಧನವಾಗಿ ಉಪಯೋಗವಾಗಲಿದ್ದು, ಇದನ್ನು ಹಸಿರು ಬಂಗಾರ' ಎಂದು ಕರೆಯಲಾಗುತ್ತದೆ. ಬಹೂಪಯೋಗಿಯಾದ ಬಿದರಿನಿಂದ ಆರ್ಥಿಕವಾಗಿ ಸದೃಢವಾಗಲು ಸಾಧ್ಯವಿದ್ದು, ರೈತರು ಇದರ ಬಗ್ಗೆ ಚಿತ್ತ ಹರಿಸುವುದು ಅಗತ್ಯವಾಗಿದೆ ಎಂದು ಅರ್ಥಶಾಸ್ತ್ರ ಉಪನ್ಯಾಸಕ ಎಚ್.ಬಿ.ಪಾಟೀಲ ಅಭಿಪ್ರಾಯಪಟ್ಟರು.

ನಗರದ ಮಹಾದೇವ ನಗರದಲ್ಲಿನ ಸ್ವಾತಿ ಪ್ರೌಢಶಾಲೆ ಆವರಣದಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಗುರುವಾರ ಜರುಗಿದ 'ವಿಶ್ವ ಬಿದಿರು ದಿನಾಚರಣೆ'ಯನ್ನು ಬಿದಿರಿನ ಗಿಡಗಳಿಗೆ ನೀರುಣಿಸುವ ಮೂಲಕ ಚಾಲನೆ ನೀಡಿ ಅವರು ಮಾತನಾಡುತ್ತಿದ್ದರು.

ಕಲ್ಲಿದ್ದಿಲನ ಕೊರತೆಯಾಗುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಬಿದಿರನ್ನು ಪರ್ಯಾಯ ಇಂಧನವನ್ನಾಗಿ ಬಳಸಬಹುದಾಗಿದೆ. ಬಿದಿರಿನ ಎಲೆಗಳು ಮಣ್ಣಿನ ಫಲವತ್ತತೆ ಹೆಚ್ಚಿಸಲು ಸಹಕಾರಿಯಾಗಿವೆ. ಅರಣ್ಯ ವೃದ್ಧಿಯಾಗುತ್ತದೆ. ಉಷ್ಣಾಂಶ ನಿಯಂತ್ರಿಸುತ್ತದೆ. ಬಿದಿರು ಸಸಿಗಳನ್ನು ನೆಟ್ಟು, ಪೋಷಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ನಿವೃತ್ತ ಕೃಷಿ ಅಧಿಕಾರಿ ಶಿವಯೋಗೆಪ್ಪಾ ಎಸ್.ಬಿರಾದಾರ, ಶಾಲೆಯ ಮುಖ್ಯ ಶಿಕ್ಷಕಿ ಸಂಗೀತಾ ಸಾಲಿ, ಶಿಕ್ಷಕಿಯರಾದ ಶಿಲ್ಪಾ, ಪೂರ್ಣಿಮಾ, ಕಾಶಮ್ಮ, ಪ್ರಿಯಾಂಕಾ, ಪ್ರೀತಿ, ಸರಸ್ವತಿ, ಭಾಗ್ಯಶ್ರೀ, ಸೇವಕಿಯರಾದ ಸುನಿತಾ, ನಾಗಮ್ಮ ಹಾಗೂ ವಿದ್ಯಾರ್ಥಿಗಳು ಇದ್ದರು.

# ಶ್ರೀ ವಿಶ್ವಕರ್ಮ ಜಯಂತಿ ಕಾರ್ಯಕ್ರಮ




**ಧಾರವಾಡ** : ವಿಶ್ವಕರ್ಮ ಸಮುದಾಯವು ಭಾರತೀಯ ಸಂಸ್ಕೃತಿ ಮತ್ತು ಕರಕುಶಲತೆಗೆ ಆಧಾರ ಸ್ತಂಭವಾಗಿದೆ. ಶಿಲ್ಪಕಲೆ, ವಾಸ್ತುಶಿಲ್ಪ ಮತ್ತು ಮರಗೆಲಸ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಅವರ ಕೌಶಲ್ಯ ಮತ್ತು ಪರಿಣತಿಯು ಅನನ್ಯವಾದದ್ದು ಎಂದು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಮಹಾಪೌರರಾದ ಜ್ಯೋತಿ ಪಾಟೀಲ ಅವರು ಹೇಳಿದರು.

ನಗರದ ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾವ ಸಭಾಭವನದಲ್ಲಿ ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತವಾಗಿ ಆಯೋಜಿಸಿದ್ದ ಭಗವಾನ ಶ್ರೀ ವಿಶ್ವಕರ್ಮ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

ನಮ್ಮ ಸುತ್ತಮುತ್ತ ನಾವು ಕಾಣುವ ಅನೇಕ ಅದ್ಭುತ ಕಲಾಕೃತಿಗಳ ಹಿಂದೆ ವಿಶ್ವಕರ್ಮರ ಶ್ರಮ ಮತ್ತು ಕೌಶಲ್ಯ ಅಡಗಿದೆ. ಆಧುನಿಕ ಯುಗದಲ್ಲಿಯೂ ವಿಶ್ವಕರ್ಮ ಸಮುದಾಯವು ತಮ್ಮ ಸಾಂಪ್ರದಾಯಿಕ ಕೌಶಲ್ಯಗಳನ್ನು ಉಳಿಸಿಕೊಂಡು ಬಂದಿದೆ. ಜೊತೆಗೆ ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಸಮಕಾಲೀನ ಸಮಾಜದ ಬೇಡಿಕೆಗಳಿಗೆ ಅನುಗುಣವಾಗಿ ತಮ್ಮ ವೃತ್ತಿಗಳನ್ನು ಮುಂದುವರೆಸುತ್ತಿದ್ದಾರೆ ಎಂದು ಹೇಳಿದರು.

ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ. ಅವರು ಮಾತನಾಡಿ, ಪೂರ್ವಜರು ಕೈಯಿಂದ ಮಾಡಿದ ಕಲೆಗಳು, ಅಂದರೆ ಕರಕುಶಲ ವಸ್ತುಗಳು, ಸಾಂಪ್ರದಾಯಿಕ ಚಿತ್ರಕಲೆಗಳು, ಶಿಲ್ಪಕಲೆಗಳು ಇತ್ಯಾದಿಗಳು ಶತಮಾನಗಳ ಕಾಲ ಉಳಿದು ತಮ್ಮದೇ ಆದ ಮಹತ್ವವನ್ನು ಉಳಿಸಿಕೊಂಡಿವೆ ಎಂದು ಅವರು ಹೇಳಿದರು.

ಕರಕುಶಲ ಕಲೆಗಳು ನಮ್ಮ ಸಂಸ್ಕೃತಿ ಮತ್ತು ಪರಂಪರೆಯ ಭಾಗವಾಗಿವೆ. ಪ್ರತಿಯೊಂದು ಕೈಯಿಂದ ಮಾಡಿದ ವಸ್ತುವು ಅದರ ಸೃಷ್ಟಿಕರ್ತನ ಕೌಶಲ್ಯ, ಶ್ರಮ ಮತ್ತು ಕಥೆಯನ್ನು ಹೇಳುತ್ತದೆ. ಇವುಗಳು ಕೇವಲ ವಸ್ತುಗಳಲ್ಲ, ಬದಲಿಗೆ ನಮ್ಮ ಇತಿಹಾಸ ಮತ್ತು ಭಾವನೆಗಳನ್ನು ಒಳಗೊಂಡಿರುತ್ತವೆ ಎಂದು ತಿಳಿಸಿದರು.

ಕುಲಕಸುಬುಗಳು ಕೇವಲ ಆರ್ಥಿಕ ಮೂಲವಲ್ಲ, ಅವು ನಮ್ಮ ಗುರುತು ಮತ್ತು ಹೆಮ್ಮೆ. ಈ ಕಲೆಗಳನ್ನು ಉಳಿಸಿಕೊಂಡು ಹೋಗುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಧಾರವಾಡ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಡಾ. ಗುರುನಾಥ ಕೆ. ಬಡಿಗೇರ ಅವರು ವಿಶೇಷ ಉಪನ್ಯಾಸ ನೀಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕುಮಾರ ಬೆಕ್ಕೇರಿ ಅವರು ಸ್ವಾಗತಿಸಿದರು. ಮಾಜಿ ಶಾಸಕಿ ಸೀಮಾ ಮಸೂತಿ ಅವರು ಮಾತನಾಡಿದರು.

ವೇದಿಕೆಯಲ್ಲಿ ಶ್ರೀ ಮೌನೇಶ್ವರ ಧರ್ಮನಿಧಿ ಸಂಸ್ಥೆ ಟ್ರಸ್ಟ್ನ ಅಧ್ಯಕ್ಷ ಮಹಾರುದ್ರ. ಬ. ಬಡಿಗೇರ, ವಿಶ್ವಕರ್ಮ ಮಹಾ ಒಕ್ಕೂಟದ ವಿಭಾಗೀಯ ಅಧ್ಯಕ್ಷ ನಿರಂಜನ ಎನ್.ಬಡಿಗೇರ, ಜಿಲ್ಲಾ ಅಧ್ಯಕ್ಷ ಸಂತೋಷ ಬಡಿಗೇರ, ವಿಶ್ವಕರ್ಮ ಮಹಾಸಭಾ ಜಿಲ್ಲಾಧ್ಯಕ್ಷ ಕಾಳಪ್ಪ ಬಡಿಗೇರ, ವಿಶ್ವಕರ್ಮ ನೌಕರರ ಸಂಘದ ಅಧ್ಯಕ್ಷ ವಿಠ್ಠಲ ಕಮ್ಮಾರ ಹಾಗೂ ಸಮಾಜದ ಮುಖಂಡರಾದ ವಸಂತ ಅರ್ಕಾಚಾರ್, ಭಾಸ್ಕರ್ ಬಡಿಗೇರ, ಸುಮಿತ್ರಾ ಬಡಿಗೇರ ಇದ್ದರು.

ಅಶ್ವಿನಿ ಎನ್. ಪತ್ತಾರ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ರವಿ ಕುಲಕರ್ಣಿ ಅವರು ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

# ಸರ್ದಾರ್ ವಲ್ಲಭಭಾಯಿ ಪಟೇಲ್ ರನ್ನು ಎಂದಿಗೂ ಮರೆಯುವಂತಿಲ್ಲ ; ವಿಜಯರೆಡ್ಡಿ



**ಕಲಬುರಗಿ:** ನಾವೆಲ್ಲರೂ ಪ್ರತಿವರ್ಷ ಸೆಪ್ಟೆಂಬರ್17 ರಂದು ಕಲ್ಯಾಣ ಕರ್ನಾಟಕ ಉತ್ಸವ ಮಾಡಲು ಸರ್ದಾರ್ ವಲ್ಲಭಭಾಯಿ ಪಟೇಲ್ ಕಾರಣಿಕರ್ತರು ಎಂದು ಶ್ರೀ ಗೋಪಾಲದೇವ ಜಾಧವ ನಸಿರ್ಂಗ್ ಕಾಲೇಜಿನ ಪ್ರಾಂಶುಪಾಲರಾದ ಪೊರ..ವಿಜಯರೆಡ್ಡಿ ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಶ್ರೀ ಗೋಪಾಲದೇವ ಜಾಧವ್ ನಸಿರ್ಂಗ್ ಕಾಲೇಜಿನಲ್ಲಿ ಹಮ್ಮಿಕೊಂಡ ಕಲ್ಯಾಣ ಕರ್ನಾಟಕ ಉತ್ಸವ ಕಾರ್ಯಕ್ರಮದಲ್ಲಿ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಭಾವಚಿತ್ರಕ್ಕೆ ಪೂಜೆ ಹಾಗೂ ಪುಷ್ಪನಮನ ಸಲ್ಲಿಸಿ ಮಾತನಾಡಿದ ಅವರು, ಈ ನಮ್ಮ ಕಲ್ಯಾಣ ಕರ್ನಾಟಕ ನಿಜಾಮನ ಆಡಳಿತದಿಂದ ನಾವೆಲ್ಲರೂ ಸ್ವತಂತ್ರರಾಗಿ ಜೀವನ ಮಾಡಲು ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಹೋರಾಟದ ಫಲವಾಗಿ ಇಂದು ನಾವೆಲ್ಲರೂ ಸಂಭ್ರಮ ಪಟ್ಟು ಆಚರಣೆ ಮಾಡಲು ಸಾಧ್ಯ ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ಈ ಸಂದರ್ಭದಲ್ಲಿ ಕಾಲೇಜಿನ ಭೋಧಕ, ಭೋಧ-ಕೇತರ ಹಾಗೂ ಸಿಬ್ಬಂದಿ ವರ್ಗದವರು ಹಾಜರಿದ್ದರು.

# ಮೊರಾರ್ಜಿ ದೇಸಾಯಿ ವಸತಿ ಕಾಲೇಜ್ ವಿದ್ಯಾರ್ಥಿ ಸಾಧನೆ: ಮುಖ್ಯಮಂತ್ರಿಗಳಿಂದ ಪ್ರಶಸ್ತಿ




**ವಿಜಯಪುರ** : ವಿಜಯಪುರದ ಸರ್ಕಾರಿ ಮೊರಾರ್ಜಿ ದೇಸಾಯಿ ವಸತಿ ಕಾಲೇಜ್‌ನ್ ಮನೋಜ್ ಜಾಧವ ಎಂಬ ವಿದ್ಯಾರ್ಥಿ ಐಐಟಿ ಧಾರವಾಡ ಕಾಲೇಜಿನಲ್ಲಿ ಇ ಮತ್ತು ಸಿಗೆ ಆಯ್ಕೆಯಾಗುವ ಮೂಲಕ ಸಾಧನೆಗೈದಿದ್ದು, ಈ ಹಿನ್ನಲೆಯಲ್ಲಿ ಸೆ.15 ರಂದು ವಿಧಾನಸೌಧಧ ಬ್ಯಾಕ್ವೆಂಟ್ ಹಾಲ್‌ನಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಗಳಿಂದ ಪ್ರಶಸ್ತಿ ಪಡೆದುಕೊಂಡಿದ್ದಾನೆ.

ವಿದ್ಯಾರ್ಥಿ ಮನೋಜ ಜಾಧವ ಸಾಧನೆಗೆ ಇಲಾಖೆಯ ಹಿರಿಯ ಅಧಿಕಾರಿಗಳು, ಪ್ರಾಂಶುಪಾಲರು, ಬೋಧಕ-ಬೋಧಕೇತರ ಸಿಬ್ಬಂದಿಗಳು ಅಭಿನಂದನೆ ಸಲ್ಲಿಸಿದ್ದಾರೆ ಎಂದು ಮೊರಾರ್ಜಿ ದೇಸಾಯಿ ವಸತಿ ವಿಜ್ಞಾನ ಪದವಿಪೂರ್ವ ಕಾಲೇಜ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಹಿಳೆಯರಿಗೆ ಸ್ವಾವಲಂಬಿಯಾಗಲು ಆರೋಗ್ಯ ಮುಖ್ಯ: ಸಂಸದ ರಮೇಶ ಜಿಗಜಿಣಗಿ



**ವಿಜಯಪುರ** : ಭಾರತ ದೇಶದಲ್ಲಿ ಕಳೆದ ಹಲವು ವರ್ಷಗಳಿಂದ ಅನೇಕ ಜನಪರ ಅಭಿವೃದ್ಧಿ ಕಾರ್ಯಕ್ರಮಗಳು ಅನುಷ್ಠಾನಗೊಳ್ಳುತ್ತಿವೆ. ಇಂದು ದೇಶ ಹಾಗೂ ರಾಜ್ಯಾದ್ಯಂತ "ಸ್ವಸ್ಥ ನಾರಿ ಸಶಕ್ತ ಪರಿವಾರ" ಅಭಿಯಾನವನ್ನು ಸೆ.17 ರಿಂದ ಅ.2ರ ವರೆಗೆ ಹಮ್ಮಿಕೊಳ್ಳಲಾಗಿದ್ದು. ಸಮುದಾಯದ ಅಭಿವೃದ್ಧಿಯ ಸಂಕಲ್ಪವನ್ನು ಹೊಂದಲಾಗಿರುತ್ತದೆ. ಸಾರ್ವಜನಿಕರ ಬದಕನ್ನು ಸುಗಮಗೊಳಿಸುವಲ್ಲಿ ಮುಖ್ಯವಾಗಿ ಮಹಿಳೆಯರು ಮತ್ತು ಮಕ್ಕಳಿಗಾಗಿ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿರುತ್ತದೆ.

ಮಹಿಳೆಯರಿಗೆ ಸ್ವಾವಲಂಬಿಯಾಗಲು ಆರೋಗ್ಯ ಮುಖ್ಯ ಎಂದು ಸಂಸದ ರಮೇಶ ಜಿಗಜಿಣಗಿ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಆಸ್ಪತ್ರೆ ಇವರ ಸಂಯುಕ್ತ ಆಶ್ರಯದಲ್ಲಿ "ಸ್ವಸ್ತ ನಾರಿ ಶಸಕ್ತ ಪರಿವಾರ "ಅಭಿಯಾನ ಉದ್ಘಾಟನಾ ಕಾರ್ಯಕ್ರಮವನ್ನು ಹಾಗೂ ಮಹಾನಗರ ಪಾಲಿಕೆಯ ಮಹಾಪೌರರಾದ ಎಮ್.ಎಸ್. ಕರಡಿಯವರೊಂದಿಗೆ ಜಂಟಿಯಾಗಿ ಚಾಲನೆ ನೀಡಿ ಅವರು ಮಾತನಾಡಿದರು.

ಮಹಾನಗರ ಪಾಲಿಕೆಯ ಮಹಾಪೌರ ಎಂ.ಎಸ್. ಕರಡಿ ಮಾತನಾಡಿ, ಸಮಾಜದ ಏಳಿಗೆಗಾಗಿ ಮಹಿಳೆಯರು ಸ್ವಾವಲಂಬಿ ಬದಕನ್ನು ಕಟ್ಟಿಕೊಳ್ಳಲು ಅವರು ಮಾನಸಿಕ, ದೈಹಿಕ, ಕೌಟಂಬಿಕ ಸಮಾಜಿಕವಾಗಿ ಆರೋಗ್ಯವಂತರಾಗಿ ಇರಲು ಈ ಅಭಿಯಾನದಲ್ಲಿ ನಡೆಯುವ ಮಹಿಳೆಯರಿಗಾಗಿ ವೈದ್ಯಕೀಯ ಆರೋಗ್ಯ ತಪಾಸಣೆ ಮಾಡಿಸುವದರಿಂದ ಆರೋಗ್ಯವಂತ ಸಮಾಜವನ್ನು ಕಾಪಾಡುವದು ನಮ್ಮೆಲ್ಲರ ಹೊಣೆಯಾಗಿದೆ ಎಂದು ಹೇಳಿದರು

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಸಂಪತ ಗುಣಾರಿ ಮಾತನಾಡಿ, ವಿಶೇಷವಾಗಿ ಮಹಿಳೆಯರ ಆರೋಗ್ಯ ತಪಾಸಣೆ, ತಾಯಿ ಮತ್ತು ಮಕ್ಕಳ ಆರೈಕೆ, ಜಾಗೃತಿ ಮತ್ತು ವರ್ತನೆಯ ಬದಲಾವಣೆ, ರಕ್ತದಾನ ಶಿಬಿರಗಳು ಹೀಗೆ ಹಲವಾರು ಕಾರ್ಯಕ್ರಮಗಳನ್ನು ಈ ಅಭಿಯಾನದಲ್ಲಿ ಹಮ್ಮಿಕೊಳ್ಳಲಾಗಿದೆ. ಉಪಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ, ತಾಲೂಕಾ ಆಸ್ಪತ್ರೆ ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿ ಉಚಿತವಾಗಿ ಸೆ.17 ರಿಂದ ಅ. 2ರ ವರೆಗೆ ಉಚಿತ ಮಹಿಳಾ ಆರೋಗ್ಯ ತಪಾಸಣೆಯನ್ನು ಹಮ್ಮಿಕೊಳ್ಳಲಾಗಿದ್ದು. ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದು ಅವರು ಹೇಳಿದರು.

ಜಿಲ್ಲಾ ಆಸ್ಪತ್ರೆಯ ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ. ಶಿವಾನಂದ ಮಾಸ್ತಿಹೊಳಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಉಪ ಮಹಾಪೌರರಾದ ಸುಮಿತ್ರಾ ಜಾಧವ, ಮಾಜಿ ಸಚಿವರಾದ ಅಪ್ಪಾಸಾಹೇಬ ಪಟ್ಟಣಶೆಟ್ಟಿ, ಮಹಾನಗರ ಪಾಲಿಕೆಯ ಸದಸ್ಯರುಗಳಾದ ರಾಜಶೇಖರ ಮಗಿಮಠ, ಶಿವರುದ್ರ ಬಾಗಲಕೋಟ, ರಾಹುಲ್ ಜಾಧವ ಸೇರಿದಂತೆ ವಿವಿಧ ಜನಪ್ರತಿನಿಧಿಗಳು, ಜಿಲ್ಲಾ ಆರೋಗ್ಯ ಇಲಾಖೆ ಅಧಿಕಾರಿ, ಸಿಬ್ಬಂದಿ ವರ್ಗದವರು ಮತ್ತು ಸಾರ್ವಜನಿಕರು ಹಾಗೂ ನಸಿರ್ಂಗ್ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಜಿಲ್ಲಾ ಆಸ್ಪತ್ರೆಯ ಹಿರಿಯ ಆಪ್ತಸಮಾಲೋಚಕ ರವಿ ಕಿತ್ತೂರ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

# ಶಿಲ್ಪ ಕಲೆಗೆ ವಿಶ್ವಕರ್ಮರ ಕೊಡುಗೆ ಅಪಾರ: ಸುಜಿತ್ ಲಾಳಸಂಗಿ



**ಇಂಡಿ** :ವಿಶ್ವ ಕರ್ಮ ಎಂದರೆ ವಿಶ್ವದ ಸೃಷ್ಟಿಕರ್ತ, ಭಾರತದ ಕಲೆ ಸಂಸ್ಕೃತಿ ಪರಂಪರೆ ಶ್ರೀಮಂತವಾಗಲು ವಿಶ್ವಕರ್ಮ ಸಮುದಾಯದ ಕೊಡುಗೆ ಅಪಾರ ವಿಶ್ವಕರ್ಮ ಉಳಿದರೆ ಸಂಸ್ಕೃತಿ ಕಲೆ ಪರಂಪರೆ ಉಳಿಯಲಿದೆ ಎಂದು ಅಖಿಲ ಕರ್ನಾಟಕ ವಿಶ್ವಕರ್ಮ ಸಮಾಜದ ಪ್ರಧಾನ ಕಾರ್ಯದರ್ಶಿ ಸುಜೀತ ಲಾಳಸಂಗಿ ಹೇಳಿದರು.

ಪಟ್ಟಣದ ಅಗಸಿಯ ಹನುಮಾನ ದೇವಸ್ಥಾನ ಹತ್ತಿರ ವಿಶ್ವಕರ್ಮ ಸಮುದಾಯದಿಂದ ನಡೆದ ವಿಶ್ವಕರ್ಮ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ವಿಶ್ವಕರ್ಮ ಸಮಾಜದ ಅಧ್ಯಕ್ಷ ರಮೇಶ ಪೊದ್ದಾರ ಮಾತನಾಡಿ ವಸ್ತುವಿಗೆ ಆಕೃತಿ ರೂಪವನ್ನು ನೀಡಿ ವಿಶ್ವವೇ ನೋಡುವಂತೆ ಮಾಡಿ ವಿಶ್ವಕ್ಕೆ ಸುಂದರ ರೂಪ ಕೊಟ್ಟ ಕೀರ್ತಿ ವಿಶ್ವಕರ್ಮ ಸಮಾಜಕ್ಕೆ ಸಲ್ಲುತ್ತದೆ ಎಂದರು. ಬೇಲೂರ ಹಳೆಬಿಡು ಪಟ್ಟದಕಲ್ಲು ಬದಾಮಿಯಲ್ಲಿನ ಅನೇಕ ದೇವಸ್ಥಾನಗಳ ಕೆತ್ತನೆಯಲ್ಲಿ ವಿಶ್ವಕರ್ಮ ಜನಾಂಗದ ಸೇವೆ ಅಸ್ಮರಣೀಯ ಎಂದರು.

ಬಂಗಾರ ವ್ಯಾಪಾರಸ್ಥ ಸಂಘದ ಅಧ್ಯಕ್ಷ ಸೋಮಶೇಖರ ಬಿರಾದಾರ ಮಾತನಾಡಿದರು.

ಸಮಿತಿಯ ಸದಸ್ಯರಾದ ಸಂದೀಪ ಧನಶೆಟ್ಟಿ, ಶ್ರೀಶೈಲ ಅರ್ಜುಣಗಿ, ವಿಜಯಕುಮಾರ ಮಹೀಂದ್ರಕರ, ದೀಲಿಪ ಪತ್ತಾರ, ಬನ್ನಪ್ಪ ಸಾತಲಗಾಂವ, ಚಂದ್ರು ಡಾಂಗೆ ಶಶಿಧರ ಕೊಪ್ಪ ಸಂಜು ಪತ್ತಾರ ಇವರನ್ನು ಸನ್ಮಾನಿರಲಾಯಿತು.

ದಯಾನಂದ ಪತ್ತಾರ, ಅಜೀತ ಲಾಳಸಂಗಿ, ರಾಘವೇಂದ್ರ ಲಾಳಸಂಗಿ, ಪ್ರವೀಣ ಪೊದ್ದಾರ, ಉಮೇಶ ಪತ್ತಾರ ಮತ್ತಿತರಿದ್ದರು.

# ಗಾಯಾಳುಗಳ ಯೋಗಕ್ಷೇಮ ವಿಚಾರಿಸಿದ ಶಾಸಕ ಲಕ್ಷ್ಮಣ ಸವದಿ



**ಅಥಣಿ** : ಕೂಲಿ ಕೆಲಸಕ್ಕೆ ಹೊರಟಿದ್ದ 30 ಕ್ಕೊ ಹೆಚ್ಚು ಮಹಿಳಾ ಕೂಲಿ ಕಾರ್ಮಿಕರು ವಾಹನ ಪಲ್ಟಿಯಾಗಿ ಎಲ್ಲರಿಗೂ ಗಾಯಗೊಂಡಿದ್ದರು.

ಅದರಲ್ಲಿ ಕೆಲವರು ಗಂಭೀರವಾಗಿ ಗಾಯಗೊಂಡಿದ್ದರು ಈ ಹಿನ್ನಲೆಯಲ್ಲಿ ಅಥಣಿ ಸರಕಾರಿ ಸಾರ್ವಜನಿಕ ಆಸ್ಪತ್ರೆ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದು ಬುಧುವಾರ ಶಾಸಕ ಲಕ್ಷ್ಮಣ ಸವದಿ ಅವರು ಗಾಯಾಳುಗಳ ಯೋಗಕ್ಷೇಮವನ್ನು ವಿಚಾರಿಸಿ ಎದೆಗುಂದದೆ ಧೈರ್ಯವಾಗಿರಿ ಎಂದು ಧೈರ್ಯ ತುಂಬಿದರು. ಬಡ ಹಾಗೂ ಕೂಲಿ ಕಾರ್ಮಿಕರ ಆಸ್ಪತ್ರೆಯ ವೆಚ್ಚವನ್ನು ಸರಕಾರದಿಂದ ಕೊಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುವದಾಗಿ ಹೇಳಿದರು

ಶಾಸಕ ಲಕ್ಷ್ಮಣ ಸವದಿ ಅವರು ಬೆಂಗಳೂರಿನಲ್ಲಿ ಇದ್ದರು ಅಪಘಾತದ ಸುದ್ದಿ ತಿಳಿದ ಕೂಡಲೇ ಬೆಂಗಳೂರಿನಲ್ಲಿ ತಮ್ಮ ಕಾರ್ಯಕ್ರಮಗಳನ್ನು ಮೊಟಕುಗೊಳಿಸಿ ಅಥಣಿಗೆ ಆಗಮಿಸಿ ಸರಕಾರಿ ಹಾಗೂ ಖಾಸಗಿ ಆಸ್ಪತ್ರೆಗೆ ಬೇಟಿ ನೀಡಿ ಗಾಯಾಳುಗಳನ್ನು ಭೇಟಿ ಮಾಡಿದರು.

ಯಾವತ್ತೂ ಯಾರು ಧೈರ್ಯ ಕಳೆದುಕೊಳ್ಳಬೇಡಿ, ನಿಮ್ಮೆಲ್ಲರ ಜೊತೆ ನಾವು ಯಾವತ್ತೂ ಇರುತ್ತೇವೆ ಎಂದು ಧೈರ್ಯ ಹೇಳಿದ ಅವರು, ಆಸ್ಪತ್ರೆಯ ವೈದ್ಯರು ಹಾಗೂ ಪೊಲೀಸ ಇಲಾಖೆ ಅಧಿಕಾರಿಗಳು ಯಾವುದೇ ಪ್ರಾಣ ಹಾನಿ ಆಗದ ಹಾಗೆ ನೋಡಿಕೊಂಡು ತುರ್ತು ಕ್ರಮ ಕೈಗೊಂಡು ಎಲ್ಲರನ್ನೂ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸುವ ಕೆಲಸವನ್ನು ಮಾಡಿದ್ದಾರೆ ಹಾಗೂ ಇಲ್ಲಿ ಇರುವ ಸಿಬ್ಬಂದಿಯವರು ಗಾಯಾಳುಗಳಿಗೆ ಅತ್ಯುತ್ತಮ ಚಿಕಿತ್ಸೆ ನೀಡುತ್ತಿದ್ದಾರೆ ಅವರಿಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ ಎಂದರು. ಜೊತೆಗೆ ಚಿಕಿತ್ಸೆಗೆ ಅಗತ್ಯವಿರುವ ಎಲ್ಲ ರೀತಿಯ ಸಹಾಯ ಸಹಕಾರ ನೀಡುವುದಾಗಿ ಭರವಸೆ ನೀಡಿದರು

ಇದೊಂದು ಅನಿರೀಕ್ಷಿತವಾಗಿ ನಡೆದಿರುವ ಘಟನೆ ಗಾಯಾಳುಗಳಿಗೆ ಹೆಚ್ಚಿನ ಚಿಕಿತ್ಸೆಯ ಅವಶ್ಯಕತೆ ಇದ್ದಲ್ಲಿ ಅವರಿಗೆ ಯಾವುದೇ ತೊಂದರೆ ಆಗದಂತೆ ಕ್ರಮ ವಹಿಸಲು ಸರಕಾರಿ ಆಸ್ಪತ್ರೆಯ ವೈದ್ಯಾಧಿಕಾರಿ ಬಸನಗೌಡ ಕಾಗೆ ಅವರಿಗೆ ಸೂಚನೆ ನೀಡಿದರು.

ಅಲ್ಲದೆ ಬಡ ಕೂಲಿ ಕಾರ್ಮಿಕರ ವೈದ್ಯಕೀಯ ವೆಚ್ಚ ಭರಿಸಲು ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಹಣವನ್ನು ಮಂಜೂರು ಮಾಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುವದಾಗಿ ಹೇಳಿದರು.

ಈ ವೇಳೆ ಪುರಸಭೆ ಸದಸ್ಯ ಸಂತೋಷ ಸಾವಡಕರ, ತಾಲೂಕು ವೈಧ್ಯಾದಿಕಾರಿ ಬಸನಗೌಡ ಕಾಗೆ, ಡಾ. ಆನಂದ ಕುಲಕರ್ಣಿ, ಡಾ. ಸಿ. ಎಸ್ ಪಾಟೀಲ, ಪ್ರಕಾಶ್ ನರಟ್ಟಿ. ಅಥಣಿ ಸಿಪಿಐ ಸಂತೋಷ ಹಳ್ಳೂರ, ಪಿಎ ಗಿರಿಮಲ್ಲಪ್ಪ ಉಪ್ಪಾರ, ಮುಖಂಡರಾದ ಜಡೆಪ್ಪ ಕುಂಬಾರ, ಆಸೀಫ್ ತಾಂಬೋಳಿ. ಪ್ರದೀಪ ನಂದಗಾಂವ.

ಸಂಗಮೇಶ ಪಲ್ಲಕ್ಕಿ. ಮಲ್ಲು ಕುಳ್ಳೊಳ್ಳಿ, ಮುತ್ತು ಮೊಕಾಶಿ,

ಬಸವರಾಜ ತೇರದಾಳ, ಮಹಾಂತೇಶ ಬಾಡಗಿ, ಮಂಜು ಹೋಳಿಕಟ್ಟಿ, ಪ್ರವೀಣ ಜಾಧವ, ಮಂಜು ನೂಲಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಬ್ರಾಹ್ಮಣ ಸಮುದಾಯದವರು ಕೇವಲ ಬ್ರಾಹ್ಮಣ ಎಂದು ನಮೂದಿಸಲು ಮನವಿ




**ಜಮಖಂಡಿ** : ರಾಜ್ಯಸರ್ಕಾರ ಹಿಂದುಳಿದ ವರ್ಗಗಳ ಆಯೋಗದಿಂದ ಇದೇ ತಿಂಗಳು 22 ರಂದು ನಡೆಯಲಿರುವ ಸಾಮಾಜಿಕ ಶೈಕ್ಷಣಿಕ ಗಣತಿಯಲ್ಲಿ ಬ್ರಾಹ್ಮಣ ಸಮುದಾಯವನ್ನು ಕೇವಲ ಬ್ರಾಹ್ಮಣ ಎಂದು ನಮೂದಿಸಲು ಕೋರಲಾಗಿದೆ. ಗಣತಿ ಪಟ್ಟಿಯಲ್ಲಿ ಬ್ರಾಹ್ಮಣ ಜಾತಿಯ ಜೊತೆಗೆ ಅನೇಕ ಉಪಜಾತಿಗಳನ್ನು ಸೇರಿಸಲಾಗಿದ್ದು ಗಣತಿದಾರರು ಜಾತಿ ಕಾಲಂ ನಲ್ಲಿ ಬ್ರಾಹ್ಮಣ ಎಂದು ನಮೂದಿಸಬೇಕು ಎಂದು ಉಪವಿಭಾಗಾಧಿಕಾರಿಗಳ ಮುಖಾಂತರ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಅತ್ಯಂತ ಕಡಿಮೆ ಜನಸಂಖ್ಯೆ ಹೊಂದಿರುವ ಬ್ರಾಹ್ಮಣ ಸಮಾಜ ದೊಂದಿಗೆ ಕ್ರಿಶ್ಚಿಯನ್, ಮುಸ್ಲಿಂ ಸೇರಿದಂತೆ ಅನೇಕ ಉಪಜಾತಿಗಳನ್ನು ಸೇರಿಸಲಾಗಿದೆ. ಆದ್ದರಿಂದ ಸಮಾಜಕ್ಕೆ ಸರ್ಕಾರದ ಸೌಲಭ್ಯಗಳು ದೊರಕಿಸುವಲ್ಲಿ ಗೊಂದಲ ಉಂಟಾಗುವ ಸಾಧ್ಯತೆ ಇರುವದರಿಂದ ಬ್ರಾಹ್ಮಣ ಸಮಾಜದ ಮನೆಗಳಿಗೆ ಭೇಟಿ ನೀಡುವ ಸಮೀಕ್ಷೆದಾರರು ಜಾತಿ ಕಾಲಂನಲ್ಲಿ ಬ್ರಾಹ್ಮಣ ಎಂದು ನಮೂದಿಸಲು ಸೂಚನೆ ನೀಡುವಂತೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ತಾಲೂಕು ಅಧ್ಯಕ್ಷ ಉಮೇಶ ದೇಸಾಯಿ, ರಾಘವೇಂದ್ರ ಉಮರ್ಜಿ, ಶ್ರೀನಿವಾಸ ಬಾದರಾಯಣಿ, ಪಿ.ಪಿ.ಜೊಷಿ ಭೀಮು ಮೊಕಾಶಿ, ರಾಜು ಹಲ್ಯಾಳಕರ, ಆರ್.ಜಿ.ಕುಲಕರ್ಣಿ, ಶೀಪೂರ್ಣಬೋದಾಚಾರ್ಯ, ಪ್ರಹಲ್ಲಾದ ಕುಲಕರ್ಣಿ, ಎನ್.ಟಿ.ಜೊಷಿ, ರಾಘವೇಂದ್ರ ಕುಲಕರ್ಣಿ, ರಮೇಶ ಕನಕೇರಿ, ಕೆ.ಆರ್.ಕುಲಕರ್ಣಿ, ಗೋಪಾಲ ಪಾಟೀಲ. ಆರ್.ಟಿ.ಜೋಷಿ, ವಿಜಯ ಕೊಡಗಲಿ, ಶ್ರೀಕಾಂತ ಕುಲಕರ್ಣಿ, ಎ.ಎಸ್.ನಿಂಬರಗಿ, ವಿಠಲರಾವ ದೇಶಪಾಂಡೆ, ಕೃಷ್ಣಾ ಶೇಖದಾರ, ಮುಂತಾದವರಿದ್ದರು.

# ಸರ್ಕಾರಿ ಕಾಲೇಜಿಗೆ ಮೊದಲು ಧ್ವನಿ ಎತ್ತಿದ್ದೇ ಶಿವಾನಂದ ಪಾಟೀಲರು: ಯತ್ನಾಳ ಹೇಳಿಕೆಗೆ ರವಿಕಾಂತ ಬಗಲಿ ತಿರುಗೇಟು



**ವಿಜಯಪುರ** : ವಿಜಯಪುರ ಜಿಲ್ಲೆಗೆ ಸರ್ಕಾರಿ ವೈದ್ಯಕೀಯ ಕಾಲೇಜು ಬೇಕು ಎಂದು ದಶಕದ ಹಿಂದೆಯೇ ಮೊಟ್ಟ ಮೊದಲು ಧ್ವನಿ ಎತ್ತಿರುವುದೇ ಜವಳಿ ಸಚಿವ ಶಿವಾನಂದ ಪಾಟೀಲ ಎಂದು ನಗರಸಭೆ ಮಾಜಿ ಸದಸ್ಯ ರವಿಕಾಂತ ಬಗಲಿ ಅವರು ಶಾಸಕ ಯತ್ನಾಳ ಹೇಳಿಕೆಗೆ ತಿರುಗೇಟು ನೀಡಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ರವಿಕಾಂತ ಬಗಲಿ ಅವರು ಖಾಸಗಿ ಆಸ್ಪತ್ರೆ ತೆರೆದು ಹಣ ದೋಚುವುದನ್ನು ಕಲಿತಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ಇದೀಗ, ಸರ್ಕಾರಿ ಸೌಲಭ್ಯ ಸಹಿತ ಖಾಸಗಿ ಸಹಭಾಗಿತ್ವದ (ಪಿಪಿಪಿ) ಹೆಸರಿನಲ್ಲಿ ವೈದ್ಯಕೀಯ ಕಾಲೇಜು ದೋಚುವ ಹುನ್ನಾರ ನಡೆಸಿದ್ದಾರೆ. ಈ ಕಾರಣಕ್ಕಾಗಿಯೇ ಖಾಸಗಿ ಸಹಭಾಗಿತ್ವದ ವೈದ್ಯಕೀಯ ಕಾಲೇಜ ಆರಂಭಕ್ಕೆ ಆಸಕ್ತಿ ತೋರುತ್ತಿದ್ದಾರೆ ಎಂದು ಯತ್ನಾಳ ವಿರುದ್ಧ ರವಿಕಾಂತ ಟೀಕಾ ಪ್ರಹಾರ ನಡೆಸಿದ್ದಾರೆ.

ಶಿವಾನಂದ ಪಾಟೀಲ ಅವರು ಆರೋಗ್ಯ ಸಚಿವರಾಗಿದ್ದ ಸಂದರ್ಭದಲ್ಲಿ ವಿಜಯಪುರ ಜಿಲ್ಲೆಯಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಪೂರಕವಾದ ಮೂಲಭೂತ ಸೌಲಭ್ಯ ಕಲ್ಪಿಸಿದ್ದಾರೆ.

ಸರ್ಕಾರಿ ಆಸ್ಪತ್ರೆಯ ಆಸ್ತಿ ಒತ್ತುವರಿ ತಡೆಯುವುದಕ್ಕಾಗಿ ಕಂಪೌಂಡ ನಿರ್ಮಿಸಿ, 153 ಎಕರೆ ಜಮೀನು ಸಂರಕ್ಷಿಸುವ ಕೆಲಸ ಮಾಡಿದ್ದಾರೆ. ತಾಯಿ–ಮಕ್ಕಳ ಆಸ್ಪತ್ರೆ ಸ್ಥಾಪಿಸಿದ್ದಾರೆ. ಅಪಘಾತದ ಸಂದರ್ಭದಲ್ಲಿ ಜೀವ ರಕ್ಷಣೆಗಾಗಿ ತುರ್ತು ಚಿಕಿತ್ಸೆ ನೀಡಲು ಟ್ರಾಮಾ ಸೆಂಟರ್ ಕಟ್ಟಡ ನಿರ್ಮಿಸಿದ್ದಾರೆ. ಕ್ಯಾನ್ಸರ್ ಆಸ್ಪತ್ರೆ ಮಂಜೂರು ಮಾಡಿಸಿದ್ದಾರೆ.

ಆರೋಗ್ಯ ಇಲಾಖೆಯ ಉತ್ತರ ಕರ್ನಾಟಕ ಭಾಗದಲ್ಲಿ ಸುಲಭ ಆಡಳಿತದ ನಿರ್ವಹಣೆಗಾಗಿ ವಿಜಯಪುರ ಜಿಲ್ಲಾ ಕೇಂದ್ರದಲ್ಲಿ ಅಪರ ನಿರ್ದೇಶಕರ ಹುದ್ದೆ ಸೃಷ್ಟಿಸಿ, ಅನುಷ್ಠಾನಕ್ಕೆ ತಂದಿದ್ದಾರೆ. ಇದೀಗ ಜನಾಶಯದಂತೆ ಏಮ್ಸ್ ಸ್ಥಾಪನೆಗೆ ಧ್ವನಿ ಎತ್ತಿದ್ದಾರೆ ಎಂದು ರವಿಕಾಂತ ವಿವರಿಸಿದ್ದಾರೆ.


ಸಚಿವ ಶಿವಾನಂದ ಪಾಟೀಲ ಅವರು ಯತ್ನಾಳ ಅವರಂತೆ ಪತ್ರಿಕಾ ಹುಲಿಯಲ್ಲ.

ಬದಲಾಗಿ ಪ್ರಚಾರ ಬಯಸದೇ ಜಿಲ್ಲೆಯ ಅಭಿವೃದ್ಧಿಗೆ ಸದ್ದಿಲ್ಲದೇ ತಮ್ಮ ಬದ್ಧತೆ ತೋರಿರುವ ಇಚ್ಛಾಶಕ್ತಿ ನಾಯಕರು. ಸಚಿವ ಶಿವಾನಂದ ಪಾಟೀಲ ಅವರು ಮಾಡಿರುವ ಅಭಿವೃದ್ಧಿ ಕಾರ್ಯಕ್ರಮಗಳು ಜನತೆಯ ಕಣ್ಣು ಮುಂದಿರುವ ಹೊಸ ಸಾಕ್ಷಿ ಎಂದು ರವಿಕಾಂತ ಬಗಲಿ ಅವರು ಟೀಕಿಸಿದ್ದಾರೆ.

ಸಚಿವ ಶಿವಾನಂದ ಪಾಟೀಲ ಅವರಿಗೆ ತಾಕತ್ತಿದೆ ಎಂಬ ಕಾರಣಕ್ಕೆ ಆರೋಗ್ಯ ಸಚಿವರಾಗಿ ಜಿಲ್ಲೆಗೆ ನಿರೀಕ್ಷೆ ಮೀರಿ ಯೋಜನೆಗಳನ್ನು ತಂದು ಅಭಿವೃದ್ಧಿ ಮಾಡಿದ್ದಾರೆ.

ಮಾಧ್ಯಮಗಳಲ್ಲಿ ಹೇಳಿಕೆ ಕೊಡುವ ಯತ್ನಾಳ ಅವರೇ ನಗರದಲ್ಲಿ ನೀವು ಮಾಡಿರುವ ರಸ್ತೆಗಳು ವರ್ಷದಲ್ಲೇ ಕಿತ್ತು ಹೋಗಿದ್ದು, ಎಲ್ಲೆಂದರಲ್ಲಿ ಗುಂಡಿಗಳು ಬಿದ್ದಿವೆ. ಒಳಚರಂಡಿಗಳು ಕಟ್ಟಿಕೊಂಡು ರಸ್ತೆಗೆ ಹರಿಯುತ್ತಿವೆ. ಇದು ನಿಮ್ಮ ಅಭಿವೃದ್ಧಿ ರೂಪದ ಭ್ರಷ್ಟಾಚಾರಕ್ಕೆ ಸಾಕ್ಷಿ. ಯತ್ನಾಳ ಅವರೇ ಇನ್ನಾದರೂ ನಗರದ ಅಭಿವೃದ್ಧಿಗೆ ಗಮನ ಕೊಡಿ ಎಂದು ರವಿಕಾಂತ ಬಗಲಿ ಅವರು ಸಲಹೆ ನೀಡಿದ್ದಾರೆ.

# ತಳೇವಾಡಕ್ಕೆ ಪಶು ಚಿಕಿತ್ಸಾಲಯ ಮಂಜೂರುಸಚಿವ ಶಿವಾನಂದ ಪಾಟೀಲರ ಪ್ರಯತ್ನದ ಫಲ



**ಕೊಲ್ಹಾರ** : ಜವಳಿ, ಸಕ್ಕರೆ, ಕಬ್ಬು ಅಭಿವೃದ್ಧಿ ಹಾಗೂ ಕೃಷಿ ಮಾರುಕಟ್ಟೆ ಸಚಿವರಾದ ಶಿವಾನಂದ ಪಾಟೀಲ ಇವರ ಪ್ರಯತ್ನದ ಫಲವಾಗಿ ಬಸವನ ಬಾಗೇವಾಡಿ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯ ಕೊಲ್ಹಾರ ತಾಲೂಕಿನ ತಳೇವಾಡ ಗ್ರಾಮಕ್ಕೆ ಸರ್ಕಾರ ಹೊಸದಾಗಿ ಪಶು ಚಿಕಿತ್ಸಾಲಯ ಮಂಜೂರು ಮಾಡಿದೆ.

ಈ ಕುರಿತು ಪಶು ಸಂಗೋಪನೆ ಹಾಗೂ ಮೀನುಗಾರಿಕೆ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಎನ್. ಮಂಗಳಗೌರಿ ಅಧಿಕೃತವಾಗಿ ತಳೇವಾಡ ಗ್ರಾಮಕ್ಕೆ ಪಶು ಚಿಕಿತ್ಸಾಲಯ ಮಂಜೂರು ಮಾಡಿ ಆದೇಶ ಹೊರಡಿಸಿದ್ದಾರೆ.

ತಳೇವಾಡ ಗ್ರಾಮಕ್ಕೆ ಪಶು ಚಿಕಿತ್ಸಾಲಯ ಮಂಜೂರು ಮಾಡಿದ್ದರಿಂದ ಈ ಭಾಗದ ಹಲವು ಹಳ್ಳಿಗಳ ಜಾನುವಾರು ಪಾಲಕರಿಗೆ ತಮ್ಮ ಪಶುಗಳಿಗೆ ತ್ವರಿತವಾಗಿ ಆರೋಗ್ಯ ಸೇವೆ ಪಡೆಯುವುದಕ್ಕೆ ಅನುಕೂಲ ಆಗಲಿದೆ

ಎಂದು ರೈತರು ಸಂತಸ ವ್ಯಕ್ತಪಡಿಸಿದ್ದಾರೆ.

ಬಸವನಬಾಗೇವಾಡಿ ವಿಧಾನಸಭೆ ಕ್ಷೇತ್ರದಸಮಗ್ರಅಭಿವೃದ್ಧಿಗೆರಾಜಕೀಯ ಇಚ್ಛಾಶಕ್ತಿ ಪ್ರದರ್ಶಿಸುತ್ತಿರುವ ಸಚಿವರಾದ ಶಿವಾನಂದ ಪಾಟೀಲ ಅವರ ಅಭಿವೃದ್ಧಿ ಪರ ಬದ್ಧತೆಗೆ ಕ್ಷೇತ್ರದ ಜನರು ಅಭಿನಂದನೆ ಸಲ್ಲಿಸಿದ್ದಾರೆ.

ವಿಜಯಪುರ ಜಿಲ್ಲೆಗೆ ಕೊಲ್ಹಾರ ತಾಲೂಕಿನ ತಳೇವಾಡ ಮಾತ್ರವಲ್ಲದೆ ಇಂಡಿ ತಾಲೂಕಿನ ಬಬಲಾದ, ತಾಳಿಕೋಟಿ ತಾಲೂಕಿನ ಪಡೇಕನೂರ ಸೇರಿದಂತೆ ರಾಜ್ಯದ 20 ಗ್ರಾಮಗಳಿಗೆ ಪಶು ಚಿಕಿತ್ಸಾಲಯಗಳನ್ನು ಮಂಜೂರಾತಿ ಮಾಡಲಾಗಿದೆ.

2022–23 ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಿದ್ದ 100 ಪಶು ಚಿಕಿತ್ಸಾಲಯಗಳಲ್ಲಿ ಈಗಾಗಲೇ 60 ಪಶು ಚಿಕಿತ್ಸಾಲಯಗಳನ್ನು ಸ್ಥಾಪಿಸಲಾಗಿದೆ. 2025–26 ನೇ ಸಾಲಿನಲ್ಲಿ ಆರ್ಥಿಕ ಇಲಾಖೆಯ ಅನುಮೋದನೆಯೊಂದಿಗೆ 20 ಪಶು ಚಿಕಿತ್ಸಾಲಯಗಳ ಸ್ಥಾಪನೆಗೆ ತಲಾ 10 ಲಕ್ಷ ರೂ.ಗಳಂತೆ ಒಟ್ಟು 2 ಕೋಟಿ ರೂ. ಮಂಜೂರಾತಿ ಸಹಿತ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

# ವೀರಶೈವ/ ಲಿಂಗಾಯತರು ಹಿಂದುಗಳೆ: ಡಾ ಕೈಲಾಸನಾಥ ಶ್ರೀ



**ಕೊಲ್ಹಾರ** :ಇತ್ತೀಚಿನ ದಿನಗಳಲ್ಲಿ ನಡೆದ ಧರ್ಮ ಧಂಗಲ್ ವಿಚಾರ ತಿಳಿದು ರಾಜ್ಯದ ಮುಗ್ದ ಜನತೆಗೆ ಧರ್ಮ ದಾರಿ ಯಾವದು ತಿಳಿಯದಾಗಿದೆ,ಬಸವ ಸಂಸ್ಕೃತಿ ಅಭಿಯಾನ ನೆಪದಲ್ಲಿ ನಡೆದ ವೀರಶೈವ ಧರ್ಮ ವಿಂಗಡಿಸಿ ಲಿಂಗಾಯತ ಬೇರೆ ಮಾಡಲು ಹೊರಟ ಮಹಾನುಭಾವರು ಅರಿಯಬೇಕು ಲಿಂಗಾಯತರು ಹಿಂದುಗಳಲ್ಲ ಅಂತಾ ಹೇಳುವವರು,ತಮ್ಮ ಮಠಗಳ ಸ್ಥಾಪನೆಮಾಡಿದಹಿಂದಿನಪೂಜ್ಯರ ಕರ್ತೃಗದ್ದುಗೆಗಳು ಸ್ಥಾವರ ಅದು ಹಿಂದು ಸಂಸ್ಕೃತಿ,ನಿಮ್ಮ ಕೊರಳಲ್ಲಿ ಕಟ್ಟಿಕೊಂಡು ಅಂಗೈಯಲ್ಲಿ ಪೂಜೆಗೊಳ್ಳುವ ಇಷ್ಟಲಿಂಗವು ಸ್ಥಾವರ ,ಅದು ಹಿಂದುತ್ವದ ಸಂಕೇತ ಎಂದು ತಿಳಿಯಿರಿ ವೀರಶೈವರು ಅಷ್ಟಾವರ್ಣ, ಪಂಚಾಚಾರ,ಷಟ್ಸ್ಥಲ,ವೇದೋಕ್ತ ಮಂತ್ರೋಚ್ಚಾರ ಮಾಡಿದರೆ ಶರಣ ಸಂಪ್ರದಾಯದವರು ವಚನ ಪಠಣ ಮಾಡಿ ಅಷ್ಟಾವರ್ಣ, ಪಂಚಾಚಾರ,ಷಟ್ಸ್ಥಲ ಸಿದ್ಧಾಂತ ಹೇಳುವರು ಇದು ಹಿಂದು ಸಂಪ್ರದಾಯವೇ, ರುದ್ರಾಕ್ಷಿ ಎಂಬುದು ರುದ್ರನ ಅಕ್ಷೀ ರುದ್ರ ದೇವರು ಇದ್ದಾನೆ ಎಂದು ನಂಬುವುದಾದರೆ ಇದು ಹಿಂದು ಸಂಸ್ಕೃತಿ ಎಂಬುದು ಸತ್ಯ, ಬಹು ಸಂಖ್ಯಾತ ಶಿವ ಶರಣರು ವೇದಗಳ ಯುಕ್ತಿಯಂತೆ ವಚನ ರಚಿಸಿದ್ದಾರೆ ಇದು ಸನಾತನ ಧರ್ಮದ ಸಿದ್ಧಾಂತ, ಬಹು ದೇವೋಪಾಸಣೆ ನಂಬದವರು ವಿರಕ್ತಮಠದ ಪಾಲನೆ ಮಾಡುವ ಪುಣ್ಯಾತ್ಮರು ಬಸವಾದಿ ಶರಣರ ಪುತ್ಥಳಿಗಳಿಗೆ ಭಸ್ಮ ಧಾರಣೆಯ ಮಾಡಿ ಹೂವಿನ ಮಾಲೆ ಹಾಕಿ ಪೂಜಿಸುವವರು ಹಿಂದು ಸಂಸ್ಕೃತಿಸಂಪನ್ನರೆ,ಇನ್ನಾದರೂ ವೈರ ಭಾವ ತೊರೆದು ಧರ್ಮ ವಿಭಜನೆ ಬಿಟ್ಟು ಎಲ್ಲರು ವೀರಶೈವರು ಎಂದು ವಪ್ಪಿಕೊಂಡು ದೇಶದ ಒಗ್ಗಟ್ಟಿಗೆ ಮುಂದಾಗೋಣ,

ಪಂಚಾಚಾರ್ಯರು ಬಸವಣ್ಣನವರ ವಪ್ಪಬೇಕು ಅನ್ನುವವರು ವೀರಭದ್ರೇಶ್ವರ ದೇವರನ್ನು ಒಪ್ಪಿಕೊಂಡು ವೀರಶೈವ ಧರ್ಮ ಪಾಲನೆ ಮಾಡಿದರೆ ಅಖಂಡ ಭಾರತ ಶಿವಮಯವಾಗುದು,ಈಗ ವೇದಿಕೆಯ ಮಾತನಾಡುವ ಪೂಜ್ಯರ ಪೂರ್ವ ಪೂರ್ವ ಪೂಜ್ಯರು ಹಿಂದು ವೀರಶೈವರು ಒಂದಾದರೆ ವಿಶ್ವವೇ ತಲೆ ಬಾಗುವದು ಅನೇಕ ಪ್ರವಚನಗಳಲ್ಲಿ ಹೇಳಿದ್ದಾರೆ,

ಇಂದು ಪೂಜ್ಯರಾದ ದಿಂಗಾಲೇಶ್ವರ ಶ್ರೀಗಳ ಬಟ್ಟೆ ಬದಲಾಯಿಸಿದ್ದು ಅವರ ಮಠದ ಪೂರ್ವ ಪರಂಪರೆ ಎಂದು ಒಪ್ಪಿದ್ದಾರೆ ಈಗ ಬಸವ ಸಂಸ್ಕೃತಿ ಅಭಿಯಾನದಲ್ಲಿ ಶರಣರ ಸಂಧೇಶ ನೀಡುವ ಹಲವು ಜನ ಪೂಜ್ಯರು ಪಂಚಪೀಠದ ಮಠಗಳಿಗೆ ಅಧಿಕಾರ ವಹಿಸಿ ವಿರಕ್ತ ಸಂಪ್ರದಾಯಸ್ತರಾಗಿದ್ದಿರಿ ನಿಮ್ಮದ್ಯಾವ ನೇಮ ಹೇಳಿರಿ ಇತ್ತಿಚ್ಚಿಗೆ ಹರಿಹರ ಪೂಜ್ಯರು ಪಂಚಪೀಠದವರು ಬೇಡ ಜಂಗಮ ಸರ್ಟಿಫಿಕೇಟ ಕೇಳಿದ್ದಾರೆ ಅಂತಾ ಹೇಳಿದ್ದಿರಾ ಈ ಮೊದಲು ತಾವು 2೦ ಮೀಸಲಾತಿ ಕೇಳಿದ್ದಿರಾ ನಿಮ್ಮದ್ಯಾವ ಧರ್ಮಪೂಜ್ಯರೇ,ತಮ್ಮ ಶ್ರೀಮಠದ ಪರಂಪರೆ ವೀರಶೈವ ಪರಂಪರೆ ಇದು ಸತ್ಯವಾದದ್ದು, ಇನ್ನಾದರು ಕಾಲ ಮಿಂಚಿಲ್ಲ ನಾವೆಲ್ಲರೂ ಹಿಂದು ವೀರಶೈವರು ಎಂದು ಹೇಳೋಣ, ಹಿಂದುಸ್ತಾನದಲ್ಲಿ ರುವವರೆಲ್ಲರೂ ಹಿಂದುಗಳೆ,ಜಾತಿ ಗಣತಿಗೆ ಬಂದಾಗ

ಸರ್ವರು ಧರ್ಮ– ಹಿಂದು ವೀರಶೈವ, ಜಾತಿ– ನಿಮ್ಮ ನಿಮ್ಮ ಸಂಪ್ರದಾಯ ಜಾತಿ ಬರೆಯಿಸಿರಿ, ಎಂದು ಗೊಂದಲದಲ್ಲಿರುವ ಜನತೆಯ ವಿಚಾರಕ್ಕೆ ಕೋಲ್ಹಾರ ಪಟ್ಟಣದ ಶ್ರೀ

ಘ ಮ ಪೂ ಧರ್ಮರತ್ನ ಡಾ.ಕೈಲಾಸನಾಥ ಮಹಾಸ್ವಾಮಿಗಳು ಶೀಲವಂತಹಿರೇಮಠ ಪೂಜ್ಯರು ಪತ್ರಿಕಾಮಾದ್ಯಮ ಗೋಷ್ಠಿ ನಡೆಸಿ ಧರ್ಮ ಸಂದೇಶ ನೀಡಿದರು.

# ಮೀಸಲು ಅರಣ್ಯದಲ್ಲೂ ಮೇಯಿಸುವ ಹಕ್ಕು ಸಿಗಲಿ: ಯಲ್ಲಪ್ಪ ಹೆಗಡೆ




**ಬಾಗಲಕೋಟೆ** : ಸರ್ಕಾರವು ಜಾರಿಗೆ ತಂದಿರುವ ಸಾಂಪ್ರದಾಯಕ ಅಲೆಮಾರಿ ಕುರಿಗಾಹಿಗಳ ಅಧಿನಿಯಮ–2025 ಕುರಿಗಾಹಿ ಸಮುದಾಯದ ದಶಕಗಳ ಹೋರಾಟಕ್ಕೆ ನ್ಯಾಯ ಒದಗಿಸಿದೆ ಎಂದು ಸಾಂಪ್ರದಾಯಕ ಕುರಿಗಾಹಿಗಳ ಹಿತರಕ್ಷಣಾ ಹೋರಾಟ ಸಮಿತಿ ಮುಖಂಡ ಯಲ್ಲಪ್ಪ ಹೆಗಡೆ ಹೇಳಿದರು. ಗುರುವಾರ ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಈ ಕಾಯಿದೆಯ ಜಾರಿಯಿಂದ ಕುರಿಗಾಹಿಗಳಿಗೆ ಕಾನೂನುಬದ್ಧ ಭದ್ರತೆ ದೊರೆಯಲಿದ್ದು, ಸಾಂಪ್ರದಾಯಕ ಸಂಚಾರಿ ಜೀವನಶೈಲಿ, ವ್ಯಕ್ತಿತ್ವ ಮತ್ತು ಹಕ್ಕುಗಳಿಗೆ ಸರ್ಕಾರ ಮಾನ್ಯತೆ ನೀಡಿರುವುದು ಕುರಿಗಾಹಿ ವೃತ್ತಿ ಸಮುದಾಯದ ಭವಿಷ್ಯವನ್ನು ಬಲಪಡಿಸುತ್ತದೆ ಎಂದರು. ಕಾನೂನು ಹೋರಾಟಕ್ಕೆ ಮಾರ್ಗದರ್ಶನ ನೀಡಿದ ತಿಂಥಣಿ ಬ್ರಿಡ್ಜ್ ಕನಕ ಗುರುಪೀಠದ ಸಿದ್ದರಾಮಾನಂದಪುರಿ ಸ್ವಾಮೀಜಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಹಾಗೂಅಧಿವೇಶನದಲ್ಲಿಈವಿಧೇಯಕವನ್ನು ಮಂಡಿಸಿ ಯಶಸ್ವಿಗೊಳಿಸಿದ ಪಶುಸಂಗೋಪನಾ ಸಚಿವ ಕೆ.ವೆಂಕಟೇಶ ಅವರಿಗೆ ಧನ್ಯವಾದ ಸಲ್ಲಿಸಿದರು. ವಿಧಾನಸಭೆಯೊಳಗೆ ಕುರಿಗಾಹಿಗಳ ಪರವಾಗಿ ಧ್ವನಿ ಎತ್ತಿದ ಶಾಸಕರಾದ ಬಿ.ಬಿ. ಚಿಮ್ಮನಕಟ್ಟಿ, ಜೆ.ಟಿ. ಪಾಟೀಲ ಅವರಿಗೆ ಧನ್ಯವಾದ ಅರ್ಪಿಸಿದರು. ಕುರಿಗಾಹಿಗಳಿಗೆ ಮೀಸಲು ಅರಣ್ಯ ಪ್ರದೇಶಗಳಲ್ಲಿಯೂ ಮೇಯುವ ಹಕ್ಕು ದೊರಕಬೇಕು ಎಂಬ ಮಹತ್ವದ ಬೇಡಿಕೆಯನ್ನು ಸರ್ಕಾರದ ಈಡೇರಿಸಬೇಕೆಂದು ಒತ್ತಾಯಿಸಿದರು.

2022ರಿಂದ ಕುರಿಗಾಹಿಗಳ ಸಂಘಟಿತ ಹೋರಾಟ ಪ್ರಾರಂಭವಾಗಿ, 2025ರಲ್ಲಿ ಬದಾಮಿ ತಾಲೂಕಿನ ಉಗಲವಾಟ ಗ್ರಾಮದ ಕುರಿಗಾಹಿ ಶರಣಪ್ಪ ಜಮ್ಮನಕಟ್ಟ ಹತ್ಯೆಯನ್ನು ಖಂಡಿಸಿ ರಾಜ್ಯವ್ಯಾಪಿ ಚಳುವಳಿ ಆರಂಭಗೊಂಡಿತ್ತು. ಆ ಹೋರಾಟದ ಒತ್ತಾಯದ ಫಲವಾಗಿ ಈ ಕಾಯಿದೆ ಜಾರಿಯಾಯಿತು ಎಂದು ಅವರು ತಿಳಿಸಿದರು. ಇನ್ನೂ ಕಾಯಿದೆಯಲ್ಲಿ ಕೆಲವು ತಿದ್ದುಪಡಿಗಳು ಮತ್ತು ಅಂಶಗಳ ಸೇರ್ಪಡೆ ಅಗತ್ಯವಿದೆ. ಇದನ್ನು ಮುಂದಿನ ಚಳಿಗಾಲದ ಅಧಿವೇಶನದಲ್ಲಿ ಸರ್ಕಾರ ಜಾರಿಗೆ ತರಬೇಕು ಎಂದು ಒತ್ತಾಯಿಸಿದರು. ಪತ್ರಿಕಾಗೋಷ್ಠಿಯಲ್ಲಿ ಸಿದ್ದಪ್ಪ ಬಳಗಾನೂರ, ಪರಶುರಾಮ ಮಂಟೂರ, ಬಸವರಾಜ ಧರ್ಮಂತಿ, ಬಸಪ್ಪ ಅಡಗಲ್ಲ, ಸುವರ್ಣಾ ನಾಗರಾಳ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಜಿಮ್ಸ್ ಆಸ್ಪತ್ರೆ ಆವರಣದಲ್ಲಿ ಸ್ವಚ್ಛತೆಯೇ ಸೇವೆ ಸ್ವಚ್ಛೋತ್ಸವ



**ಕಲಬುರಗಿ:** ನಗರದ ಜಿಮ್ಸ್ ಆಸ್ಪತ್ರೆ ಆವರಣದಲ್ಲಿ "ಸ್ವಚ್ಛತೆ–ಯೇ ಸೇವೆ 2025–ಸ್ವಚ್ಛೋತ್ಸವ ಕಾರ್ಯಕ್ರಮ" ಸುಲಭ ಇಂಟರ್‌ನ್ಯಾಷನಲ್ ಸೋಶಿಯಲ್ ಸರ್ವಿಸ್ ಆರ್ಗನೈಜೇಷನ್ ವತಿಯಿಂದ ಜರುಗಿತು. "ಸ್ವಚ್ಛತೆ–ಯೇ ಸೇವೆ 2025" ಎಂಬ ಘೋಷ ವಾಕ್ಯದೊಂದಿಗೆ ಸ್ವಚ್ಛೋತ್ಸವ" ಕಾರ್ಯಕ್ರಮದಲ್ಲಿ ಆಸ್ಪತ್ರೆ ಬರುವ ರೋಗಿಗಳಿಗೆ ಹಾಗೆ ಜೊತೆಗೆ ಬರುವ ಅಟೆಂಡೆರ್ಗಳಿಗೆ ಅನುಕೂಲ ಆಗಲು ಸ್ವಚ್ಛತೆ ಬಗ್ಗೆ ಅರಿವು ಮೂಡಿಸಲಾಯಿತು. ಇಲ್ಲಿನ ಹಾಜರಿದ್ದ ನೂರಾರು ಶೂಶ್ರೂಷಾ ವಿದ್ಯಾರ್ಥಿಗಳು, ಪ್ಯಾರಾ ಮೆಡಿಕಲ್ ವಿಧ್ಯಾರ್ಥಿಗಳು, ಸಾರ್ವಜನಿಕರು ಹಾಗೂ ಸಿಬ್ಬಂದಿಗಳ ಉಪಸ್ಥಿತಿಯಲ್ಲಿ ಕಾರ್ಯಕ್ರಮ ಜರುಗಿ–ತು. ಜಿಮ್ಸ್ ಆಸ್ಪತ್ರೆಯ ಸಹಾಯಕ ಆಡಳಿತಾಧಿಕಾರಿ ವೀರಣ್ಣ ತಳವಾರ ಅವರು ಎಲ್ಲರನ್ನು ಉದ್ದೇಶಿಸಿ, ಆಸ್ಪತ್ರೆಯ ಆವರಣದಲ್ಲಿನ ಸುಲಭ ಶೌಚಾಲಯದ ಸದುಪಯೋಗಪಡಿಸಿಕೊಳ್ಳಲು, ಕಸವನ್ನು ಕಸದ ಡಬ್ಬದಲ್ಲಿಯೇ ಹಾಕಲು, ಸಿಕ್ಕ ಸಿಕ್ಕಲ್ಲಿ ಉಗುಳದಿರಲು, ಆವರಣವನ್ನು ಸ್ವಚ್ಛವಾಗಿಟ್ಟುಕೊಳ್ಳಲು ಎಲ್ಲರೂ ಕೈ ಜೋಡಿಸಬೇಕು, ಸ್ವಚ್ಛ ಪರಿಸರದಲ್ಲಿ ಬದುಕುವುದು ನಮ್ಮ ಹಕ್ಕು ಆಗಬೇಕು. ಆಸ್ಪತ್ರೆಗೆ ಬರುವ ರೋಗಿಗಳಿಗೆ ನಾವು ನೀಡುವ ಚಿಕಿತ್ಸೆ ಜೊತೆಗೆ, ಸ್ವಚ್ಛತೆಯೇ ನಮ್ಮ ಮೊದಲ ಆದ್ಯತೆ ಆಗಬೇಕೆಂದು ತಿಳಿಸಿದರು. ಈ ರೀತಿಯಕಾರ್ಯಕ್ರಮಗಳಮೂಲಕಸಾರ್ವಜನಿಕರಲ್ಲಿ "ಸ್ವಚ್ಛತೆಯೇ ಸೇವೆ" ಎಂಬ ಜಾಗೃತಿ ಮೂಡಿಸಬೇಕು ಎಂದು ಹೇಳಿದರು.

ನಂತರ ಗುಂಡಣ್ಣ ಡಿಗ್ಗಿ ಅವರು, ತಮ್ಮ ಹಾಸ್ಯ ಚಟಾಕಿಗಳ ಭಾಷಣದ ಮೂಲಕ ಸಾರ್ವಜನಿಕರಲ್ಲಿ ಸ್ವಚ್ಛತೆ ಕಾಪಾಡುವಲ್ಲಿ ಸಹಜವಾಗಿ ನಾವು ಮಾಡುವ ತಪ್ಪುಗಳನ್ನುಮನಮುಟ್ಟುವಂತೆವಿವರಿಸಿತಿದ್ದಿಕೊಳ್ಳಲು ತಿಳಿಸಿದರು. ಸುಲಭ ಸಂಸ್ಥೆಯ ಸಹಾಯಕ ನಿಯಂತ್ರಕ ಅಶೋಕ್ ಕುಮಾರ ಝಾ ಮತ್ತು ಕಲಬುರಗಿ ಜಿಲ್ಲಾ ಘಟಕದ ಆರ್.ಪಿ. ಸಿಂಗ್ ಕೂಡ ಹಾಜರಿದ್ದು, ತಮ್ಮ ಸುಮಾರು 15 ಜನ ಸಿಬ್ಬಂದಿಗಳ ನೆರವಿನಿಂದ ಸ್ವಚ್ಛತಾ ಕಾರ್ಯ ನಡೆಸಿದರು.

# ಸಮೀಕ್ಷೆಯ ಧರ್ಮದ ಕಾಲಂನಲ್ಲಿ 'ಲಿಂಗಾಯತ' ಎಂದು ನಮೂದಿಸಿ: ಅಶೋಕ ಬರಗುಂಡಿ



**ಬಾಗಲಕೋಟೆ** : ಲಿಂಗಾಯತ ಸ್ವತಂತ್ರ ಧರ್ಮದ ಮಾನ್ಯತೆಗಾಗಿ ನಮ್ಮ ಹೋರಾಟ ವರ್ಷಗಳಿಂದ ನಡೆಯುತ್ತಿದೆ. ಬರುವ ಸೆಪ್ಟೆಂಬರ್ 22ರಿಂದ ಆರಂಭಗೊಳ್ಳಲಿರುವ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಗಣತಿಯಲ್ಲಿ ಬಸವ ತತ್ವಾನುಯಾಯಿಗಳು ಧರ್ಮದ ಕಾಲಂನಲ್ಲಿ ಸ್ಪಷ್ಟವಾಗಿ 'ಲಿಂಗಾಯತ' ಎಂದು ನಮೂದಿಸುವುದು ಅತ್ಯಗತ್ಯ" ಎಂದು ಜಾಗತಿಕ ಲಿಂಗಾಯತ ಮಹಾಸಭಾಜಿಲ್ಲಾಧ್ಯಕ್ಷಅಶೋಕಬರಗುಂಡಿ ಮನವಿ ಮಾಡಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಬಸವ ತತ್ವವು ಸಮಸಮಾಜದ ಕಲ್ಪನೆಯೊಂದಿಗೆ ಎಲ್ಲರನ್ನೂ ಒಪ್ಪಿಕೊಳ್ಳುವ ಸಂಸ್ಕೃತಿ. ಲಿಂಗಾಯತ ಅಸ್ಮಿತೆಯನ್ನು ಉಳಿಸಿಕೊಳ್ಳಲು ಗಣತಿ ವೇಳೆಯಲ್ಲಿ ಧರ್ಮದ ಕಾಲಂನಲ್ಲಿ ಲಿಂಗಾಯತ ಎಂದು ಬರೆಯಿಸಿ, ಜಾತಿ ಕಾಲಂನಲ್ಲಿ ಮಾತ್ರ ತಮಗೆ ಸೇರಿದ ಒಳಪಂಗಡವನ್ನು ಉಲ್ಲೇಖಿಸಬೇಕು ಎಂದು ಹೇಳಿದರು. "ಸಂಖ್ಯೆ ಬಹಳ ಮುಖ್ಯವಾದ ಅಂಶ. ಲಿಂಗಾಯತ ಎಂದು ನಮೂದಿಸಿದವರ ಸಂಖ್ಯೆ ಹೆಚ್ಚಾದಷ್ಟೂ ಸ್ವತಂತ್ರ ಧರ್ಮದ ಹೋರಾಟಕ್ಕೆ ಬಲ ಸಿಗಲಿದೆ" ಎಂದರು.

ಬಸವಸಂಸ್ಕೃತಿಉತ್ಸವಬಾಗಲಕೋಟೆಯಲ್ಲಿ ಅದ್ದೂರಿಯಾಗಿ ಜರುಗಿದ ಹಿನ್ನೆಲೆಯಲ್ಲಿ ಸಂಘಟಕರಿಗೆ ಗೌರವ ಸೂಚಿಸುವ ಧನ್ಯತಾ ಸಮಾವೇಶ ಶೀಘ್ರದಲ್ಲಿ ನಡೆಯಲಿದೆ. ಇದೇ ವೇಳೆ ಅಕ್ಟೋಬರ್ 5ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯಲಿರುವ ಬಸವ ಸಂಸ್ಕೃತಿ ಅಭಿಯಾನ ಸಮಾರೋಪ ಸಮಾರಂಭದಲ್ಲಿ ಸರ್ಕಾರದಿಂದ ಬಸವಣ್ಣನನ್ನು ಸಾಂಸ್ಕೃತಿಕ ನಾಯಕ–ರೆಂದು ಘೋಷಿಸಿದ ಪ್ರತಿನಿಧಿಗಳನ್ನು ಸನ್ಮಾನಿಸಲಾಗುವುದು ಎಂದು ತಿಳಿಸಿದರು. ಪತ್ರಿಕಾ ಗೋಷ್ಠಿಯಲ್ಲಿ

ಬಸವರಾಜ ಕಡಪಟ್ಟಿ, ಶ್ರೀಶೈಲ ಕರಿಶಂಕರಿ, ಗುರುಬಸವ ಸಿಂಧೂರ,

ಬಸವರಾಜ ಅನಗವಾಡಿ, ಶೋಭಾ ಹುಲಗಬಾಳಿ ಮತ್ತು ಗಿರಿಜಾ ಹೊಸಮನಿ ಉಪಸ್ಥಿತರಿದ್ದರು.

# ವ್ಹಾಲಿಬಾಲ್ ರಾಜ್ಯಮಟ್ಟಕ್ಕೆ ಆಯ್ಕೆ



**ಮಹಾಲಿಂಗಪುರ** : ಸ್ಥಳೀಯ ಕೆಎಲ್ಇ ಸಂಸ್ಥೆಯ ಎಸ್ಸಿಪಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಮುಧೋಳದ ಸಾಯಿನಿಕೇತನ ಕಾಲೇಜಿನ ಆವರಣದಲ್ಲಿ ಬುಧವಾರ ನಡೆದ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿ ಬಾಲಕಿಯರ ವ್ಹಾಲಿಬಾಲ್ ಪಂದ್ಯದಲ್ಲಿ ಪ್ರಥಮ ಸ್ಥಾನಗಳಿಸಿ ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಕ್ರೀಡಾ ಪಟುಗಳಿಗೆ ದೈಹಿಕ ಶಿಕ್ಷಣ ನಿರ್ದೇಶಕ ಬಿ. ಎಂ.ಸಿದ್ನಾಳರಮಾರ್ಗದರ್ಶನಲಭಿಸಿತ್ತುಎಂದು ಪ್ರಾಚಾರ್ಯ ಎಲ್. ಬಿ. ತುಪ್ಪದ ತಿಳಿಸಿದ್ದಾರೆ.

# ತಂದೆ ಮೇಲಿನ ಸೇಡಿಗೆ ಮಗಳನ್ನೇ ಅಪಹರಿಸಿ ಕೊಂದ



**ಕಲಬುರಗಿ:** ಮಳಖೇಡ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸೆ.11 ರಂದು ಭಾಗ್ಯಶ್ರೀ (21) ಎಂಬ ಯುವತಿ ಕಾಣೆಯಾಗಿದ್ದು, ನಾಪತ್ತೆಯಾಗಿ 7 ದಿನಗಳ ಬಳಿಕ ಕೊಳೆತ ಸ್ಥಿತಿಯಲ್ಲಿ ಯುವತಿಯ ಮೃತದೇಹ ಪತ್ತೆಯಾಗಿದೆ.

ಮಳಖೇಡ ಗ್ರಾಮದ ಸುಲಹಳ್ಳಿ ನಿವಾಸಿಯಾಗಿದ್ದ ಭಾಗ್ಯಶ್ರೀ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಮಂಜುನಾಥ್ ಎಂಬ ಶಂಕಿತ ಆರೋಪಿಯನ್ನ ಬಂಧಿಸಲಾಗಿದೆ.

ತಂದೆ ಮೇಲಿನ ಸೇಡಿಗಾಗಿ ಭಾಗ್ಯಶ್ರೀಯನ್ನು ಕಬ್ಬಿಣದ ರಾಡ್‌ನಿಂದ ತಲೆಗೆ ಹೊಡೆದು ಕೊಲೆ ಮಾಡಿರುವ ಅನುಮಾನ ವ್ಯಕ್ತವಾಗಿದ್ದು, ಈ ಸಂಬಂಧ ಪೊಲೀಸರು ಆರೋಪಿಯ ವಿಚಾರಣೆ ನಡೆಸಿದ್ದಾರೆ.

ಈ ಹಿಂದೆ ಮಂಜುನಾಥ್ ಸಹೋದರ ವಿನೋದ್ ಆತ್ಮಹತ್ಯೆ ಮಾಡಿಕೊಂಡಿದ್ದ. ಸಹೋದರನ ದುಡುಕಿನ ನಿರ್ಧಾರಕ್ಕೆ ಭಾಗ್ಯಶ್ರೀ ಅಪ್ಪ ಕಾರಣ ಎಂಬ ಆರೋಪ ಇದೆ. ಆರೋಪಿಯ ಸಹೋದರ ವಿನೋದ್ ಮಳಖೇಡ ಗ್ರಾಮದ ಅಲ್ಟ್ರಾಟೆಕ್ ಸಿಮೆಂಟ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು, ಖಾಯಂ ಉದ್ಯೋಗದ ಆಕಾಂಕ್ಷಿ ಆಗಿದ್ದ. ಆದರೆ ಈತನಿಗೆ ಖಾಯಂ ಉದ್ಯೋಗ ಸಿಗದಿರಲು ಭಾಗ್ಯಶ್ರೀ ತಂದೆ ಚೆನ್ನವೀರಪ್ಪ ಕಾರಣ ಎಂದು ಆರೋಪಿಸಲಾಗಿದೆ. ವಿನೋದ್ ಉದ್ಯೋಗ ಖಾಯಂ ಆಗದ ಹಿನ್ನೆಲೆಯಲ್ಲಿ ಮನನೊಂದು ಜೀವ ಕಳೆದುಕೊಂಡಿದ್ದ. ಸಹೋದರ ನಿಧನದಿಂದ ರೊಚ್ಚಿಗೆದ್ದಿದ್ದ ಮಂಜುನಾಥ್ ಸೇಡು ತೀರಿಸಿಕೊಳ್ಳೋದಾಗಿ ಎಚ್ಚರಿಕೆ ನೀಡಿದ್ದ ಎನ್ನಲಾಗಿದೆ. ಅಂತೆಯೇ ಸೆಪ್ಟೆಂಬರ್ 11 ರಂದು ಚೆನ್ನವೀರಪ್ಪ ಪುತ್ರಿಯರು ವಾಯುವಿಹಾರಕ್ಕೆ ತೆರಳಿದ್ದ ವೇಳೆ ಅಲ್ಲಿಗೆ ಆಗಮಿಸಿದ ಮಂಜುನಾಥನೇ ಭಾಗ್ಯಶ್ರೀಯನ್ನ ಅಪಹರಣ ಮಾಡಿ ಕೃತ್ಯ ನಡೆಸಿದ್ದಾನೆ ಎಂಬ ಶಂಕೆ ಇದೆ. ಪೊಲೀಸರು ವಿಚಾರಣೆ ನಡೆಸುತ್ತಿದ್ದಾರೆ.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State